ಸಂಪುಟ 01 | ಸಂಚಿಕೆ 84 | ಶುಕ್ರವಾರ 06 ಫೆಬ್ರವರಿ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ಸ್ತ್ರೀ ಜನನಾಂಗ ಊನಗೊಳಿಸುವಿಕೆಗೆ ಅಂತರರಾಷ್ಟ್ರೀಯ ಶೂನ್ಯ ಸಹಿಷ್ಣುತೆಯ ದಿನ

ಜನನಾಂಗ ಊನಗೊಳಿಸುವಿಕೆಯಿಂದ ಮಹಿಳೆಯರು ಎದುರಿಸುವ ಪರಿಣಾಮಗಳು ಮತ್ತು ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಜನರಿಗೆ ಶಿಕ್ಷಣ ನೀಡಲು ಫೆಬ್ರವರಿ 6 ರಂದು ಸ್ತ್ರೀ ಜನನಾಂಗ ಊನಗೊಳಿಸುವಿಕೆಗೆ ಅಂತರರಾಷ್ಟ್ರೀಯ ಶೂನ್ಯ ಸಹಿಷ್ಣುತೆಯ ದಿನವನ್ನು ಆಚ-ರಿಸಲಾಗುತ್ತದೆ.

## ಸುಭಾಷಿತ

ಕಲಿಯಲು ತಿಕಸ್ಕರಿಸುವುದು ಜೀವಿಸಲು ತಿರಸ್ಕರಿಸುವುದಕ್ಕೆ ಸಮನಾದದು.

ರಾಮಕೃಷ್ಣ ಪರಮಹಂಸ

## ಕೆ ಅಮರೇಶ್ ಪಾಟೀಲ್ ಗೆ 2025 ರ ಕರ್ನಾಟಕ ಸಹಕಾರ ಶಿರೋಮಣಿ ಪ್ರಶಸ್ತಿಗೆ ಭಾಜನ

ನೈಜ್ಯ ದೆಸೆ ನ್ಯೂಸ್

ಹಾಲಾಪೂರ ಸಹಕಾರ ಕ್ಷೇತ್ರದಲ್ಲಿ ವಿವಿಧ ಹುದ್ದೆಯನ್ನು ಅಲಂಕರಿಸಿ ಸಾಮಾಜಿಕ, ಶೈಕ್ಷಣಿಕ ಕ್ಷೇತ್ರದಲ್ಲಿ ಹಲವಾರು ಜನಪರ ಕಾರ್ಯಕ್ರಮಗಳ ಮೂಲಕ ಜನರ ಪ್ರೀತಿ , ಮೆಚ್ಚುಗೆ ಗಳಿಸಿರುವ ಹಾಗೂ ಕಾಯಕ ರತ್ನ, ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರು, ನಿರ್ದೇಶಕರು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ ಬೆಂಗಳೂರು,



ಕೆ ಅಮರೇಶ್ ಪಾಟೀಲ್ ಇವ-ರಿಗೆ ಕನ್ನಡಪ್ರಭ ದಿನಪತ್ರಿಕೆ, ಏಷ್ಯನೆಟ್ ಸುವರ್ಣ ನ್ಯೂಸ್ ಸುದ್ದಿ ವಾಹಿನಿಯಿಂದ ಸಹಕಾರ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕ ರತ್ನರಿಗೆ ನೀಡುತ್ತಿರುವ "ಕರ್ನಾಟಕ ಸಹಕಾರ ಶಿರೋಮಣಿ-2025" ರ ಪ್ರಶಸ್ತಿಗೆ ಭಾಜನರಾಗಿದ್ದಾರೆ , ಈ ಒಂದು ಪ್ರಶಸ್ತಿಯನ್ನು ಫೆಬ್ರವರಿ 7 ರಂದು ಬೆಂಗಳೂರಿನ ದಿ ಕ್ಯಾಪಿಟಲ್ ಹೋಟೆಲ್ ನಲ್ಲಿ ಪ್ರಶಸ್ತಿ ಪ್ರಧಾನ ಸಮಾರಂಭ ನಡೆಯುವುದು, ಹೀಗಾಗಿ ಅವರ ಅಪಾರ ಅಭಿಮಾನಿಗಳು, ಹಿತೈಷಿಗಳು, ಸ್ನೇಹಿತರ ಬಳಗ ಅಭಿನಂದನೆ ಸಲ್ಲಿಸಿದ್ದಾರೆ.

# ರಾಜ್ಯದಲ್ಲಿರುವ ಅಕ್ರಮ ಬಾಂಗ್ಲಾ ವಲಸಿಗರ ಪತ್ತೆಗೆ ಆಪರೇಷನ್ ಆರಂಭ

ಬೆಂಗಳೂರು: ಬಾಂಗ್ಲಾ ದೇಶೀಯರು ಸೇ-ರಿದಂತೆ ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವವರನ್ನು ಪತ್ತೆ ಹಚ್ಚಿ, ಗಡೀಪಾರು ಮಾಡುವ ಕಾರ್ಯಾಚರಣೆಯನ್ನು ಅಭಿಯಾನದ ಮಾದರಿಯಲ್ಲಿ ನಡೆಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಗೃಹ ಸಚಿವ ಡಾ.ಜಿ ಪರಮೇಶ್ವರ್ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡುವ ವೇಳೆಯಲ್ಲಿ ಅವರು, ರಾಜ್ಯದಲ್ಲಿ 20 ಲಕ್ಷ ಬಾಂಗ್ಲಾ ದೇಶದ ಪ್ರಜೆಗಳು ಅಕ್ರಮವಾಗಿ ನೆಲೆಸಿದ್ದಾರೆ ಎಂದು ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿದೆ ಎಂಬುದಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದರು.

ಕೇಂದ್ರ ವಿದೇಶಾಂಗ ಸಚಿವಾಲಯದ ಎಫ್ ಆರ್ ಆರ್ ಓ ಸಂಸ್ಥೆ ಬೆಂಗಳೂ-ರಿನಲ್ಲಿದೆ. ಅವರ ದಾಖಲಾತಿಯಲ್ಲಿ 20 ಲಕ್ಷ ಜನ ಅಕ್ರಮವಾಗಿ ನೆಲೆಸಿರುವ ಮಾಹಿತಿ ಇಲ್ಲ. ಒಂದು ವೇಳೆ ರಿಜಿಸ್ಟರ್ ಪುಸ್ತಕದಲ್ಲಿ ನೋಂದಣಿಯಾಗದೆ ಹೊರಗುಳಿದಿರುವವರನ್ನು ಪತ್ತೆ ಹಚ್ಚಿ, ಗಡೀಪಾರು ಮಾಡಲು ಎಲ್ಲಾ



ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುವುದು. ಈಗಾಗಲೇ ಅಕ್ರಮವಾಗಿ ನೆಲೆಸಿದ್ದ 390 ವಿದೇಶಿ ಪ್ರಜೆಗಳನ್ನು ಗಡಿಪಾರು ಮಾಡಲಾಗಿದೆ ಎಂದರು. ಸಾಮಾಜಿಕ ಮಾಧ್ಯಮ ನಿರ್ವಹಣೆ ಸೇವೆ ವಿಧಾನ ಮಂಡಲದ ಅಧಿವೇಶನ ನಡೆಯುವ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಸಚಿವರು, ಶಾಸಕರು ಸಭೆ ನಡೆಸಿದ್ದೇವೆ. ಎಸ್‌ಇಪಿ, ಟಿಎಸ್‌ಪಿ ಯೋಜನೆಯಡಿ ಕಳೆದ ಬಜೆಟ್‌ನಲ್ಲಿ 42 ಸಾವಿರ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಆದರೆ ಅದು ಎಲ್ಲಾ ಇಲಾಖೆಗಳ ನಡುವೆ ಹಂಚಿಕೆಯಾಗಿದೆ. ಯಾವ ಇಲಾಖೆಯಲ್ಲಿ ಎಷ್ಟು ಖರ್ಚಾಗಿದೆ ಎಂಬ ನಿಖರ ಮಾಹಿತಿ ಸಿಗುತ್ತಿಲ್ಲ. ಫಲಾನುಭವಿಗಳಿಗೂ ಸೌಲಭ್ಯ ದೊರೆಯುತ್ತಿಲ್ಲ ಎಂಬ ಕುರಿತು ಸಭೆಯಲ್ಲಿ ಚರ್ಚಿಸಲಾಗಿದೆ.

ಈ ಮೊದಲು ಎಸ್‌ಇಪಿ, ಟಿಎಸ್‌ಪಿ ಅನುದಾನವನ್ನು ಸಮಾಜ ಕಲ್ಯಾಣ ಇಲಾಖೆಗೆ ನೀಡಲಾಗುತ್ತಿತ್ತು. ಅಲ್ಲಿಂದ ಕಾರ್ಯಕ್ರಮ ರೂಪಿಸಲಾಗುತ್ತಿತು. ಗಂಗಾ ಕಲ್ಯಾಣ, ಸ್ವಯಂ ಉದ್ಯೋಗ, ವಾಹನ ಖರೀದಿ ಸೇರಿದಂತೆ ವಿವಿಧ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿತ್ತು. ಅಂತಹ ಸಂದರ್ಭದಲ್ಲಿ ಫಲಾನುಭವಿಗಳಿಗೂ ನೇರವಾಗಿ ಸೌಲಭ್ಯ ಸಿಗುತ್ತಿತ್ತು. ಈಗ ಮತ್ತೆ ಮೊದಲಿನ ವ್ಯವಸ್ಥೆಯಂತೆ ಸಮಾಜ ಕಲ್ಯಾಣ ಇಲಾಖೆಗೆ ಅನುದಾನವನ್ನು ಒದಗಿಸಬೇಕು. ಅಲ್ಲಿಂದ ಹಂಚಿಕೆ ಮಾಡಬೇಕು ಎಂಬುದು ಎಲ್ಲಾ ಜನಪ್ರತಿನಿಧಿಗಳ ಅಭಿಪ್ರಾಯವಾಗಿದೆ. ಅದನ್ನು ಮುಖ್ಯಮಂತ್ರಿಯವರೊಂದಿಗೆ

3ನೇ ಪುಟಕ್ಕೆ

# ಎಸ್‌ಜೆಟಿ ಕಾಲೇಜಿನಲ್ಲಿ ಆರೋಗ್ಯ ಶಿಬಿರ



ನೈಜ್ಯ ದೆಸೆ ನ್ಯೂಸ್

ಬಳ್ಳಾರಿಯ ಶ್ರೀ ಗುರುತಿಪ್ಪೇರುದ್ರ ಪದವಿ ಕಾಲೇಜಿನ ಎನ್‌ಎಸ್‌ಎಸ್‌ನ 'ಎ' ಮತ್ತು 'ಬಿ' ಘಟಕವು ಗುಜರಾತ್‌ನ ಶ್ರೀಮದ್ ರಾಮಚಂದ್ರ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಜಿಲ್ಲಾ ಪಂಚಾಯತಿ, ಆರೋಗ್ಯ ಮತ್ತು ಶಿಕ್ಷಣ ಇಲಾಖೆ, ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಸ್ಪಂದನ ಸ್ವಯಂ ಸೇವಾ ಸಂಸ್ಥೆ, ಶ್ರೀ ಮಾತೃ ಮಹಿಳಾ ಮಂಡಳಿ ಬಳ್ಳಾರಿ ಇವರ ಜಂಟಿ ಆಶ್ರಯದಲ್ಲಿ ಆರೋಗ್ಯ ತಪಾಸಣ ಶಿಬಿರ ಮತ್ತು ರಕ್ತ ಪರಿಶೀಲನೆ ಹಾಗು ಅನೀಮಿಯಾ ತಡೆ ಜಾಗೃತಿ ಶಿಬಿರ ನಡೆಯಿತು.

ಶ್ರಿ ಗುರುತಿಪ್ಪೇರುದ್ರ ಪದವಿ ಶಾಲೆಯ ಮಕ್ಕಳಿಗೆ, ಶಿಕ್ಷಕರುಗಳಿಗೆ ಮತ್ತು ಪದವಿ ಉಪನ್ಯಾಸಕರುಗಳಿಗೆ ಆರೋಗ್ಯ ತಪಾಸಣೆ ನಡೆಸಲಾಯಿತು. 950 ವಿದ್ಯಾರ್ಥಿಗಳು ಆರೋಗ್ಯ ತಪಾಸಣೆ ಮತ್ತು ರಕ್ತಪರೀಕ್ಷೆಗೆ ಒಳಪಟ್ಟರು. ಶ್ರಿ ಗುರುತಿಪ್ಪೇರುದ್ರ ಪದವಿ ಕಾಲೇಜಿನ ಎನ್‌-ಎಸ್‌ಎಸ್ 'ಎ' ಘಟಕದ ಕಾರ್ಯಕ್ರಮಾಧಿಕಾರಿ ಪಿ.ವಿ. ನಾಗರಾಜ ಹಾಗು 'ಬಿ' ಘಟಕದ ಕಾರ್ಯಕ್ರಮಾಧಿಕಾರಿ ಜಿ. ಶಶಿಧರ, ಶ್ರೀಮಾತೃ ಮಹಿಳಾ ಮಂಡಳಿ ಬಳ್ಳಾರಿಯ ತಪಾಸಣಾ ಅಧಿಕಾರಿಗಳಾದ ಚಂದ್ರಶೇಖರ್, ಹ-ರೀಶ್ ಮತ್ತು ಸುರೇಶ್ ನೇತೃತ್ವವಹಿಸಿದ್ದರು.

ಶ್ರಿ ಗುರುತಿಪ್ಪೇರುದ್ರ ಮಹಾವಿದ್ಯಾಲಯ ಸಂಸ್ಥೆಯ ಅಧ್ಯಕ್ಷರಾದ ಎಸ್.ಎನ್. ರುದ್ರಪ್ಪ, ಕಾರ್ಯದರ್ಶಿಗಳಾದ ಜಿ. ನಾಗರಾಜ್, ಪ್ರಾಚಾರ್ಯರಾದ ಆರ್. ರೀನಾ, ಶಾಲಾ ನಿರ್ದೇಶಕಿಯರಾದ ಜಿ. ಮಂಜುಳ ಅವರು ಶಿಬಿರದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

## ಹಾಲಾಪೂರ ಗ್ರಾಪಂ ಆಡಳಿತಾಧಿಕಾರಿಯಾಗಿ ಹನುಮಂತಪ್ಪ ಭಜಂತ್ರಿ ಅಧಿಕಾರ ಸ್ವೀಕಾರ

ನೈಜ್ಯ ದೆಸೆ ನ್ಯೂಸ್

ಹಾಲಾಪೂರ: ರಾಜ್ಯದಲ್ಲಿ ಗ್ರಾಮ ಪಂಚಾಯತಿಗಳ ಅಧಿಕಾರವಧಿ ಮುಗಿದ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿಗಳು ಆಡಳಿತ ಅಧಿಕಾರಿಗಳನ್ನು ನೇಮಕ ಮಾಡಿದ್ದು, ಹಾಲಾಪೂರ ಗ್ರಾಮ ಪಂಚಾಯಿತಿಗೆ ಹನುಮಂತಪ್ಪ ಭಜಂತ್ರಿ ಸಹಾಯಕ ನಿರ್ದೇಶಕರು ತೋಟಗಾರಿಕೆ ಇಲಾಖೆ ಮಾನ್ವಿ ಇವರು ಆಡಳಿತ ಅಧಿಕಾರಿಯಾಗಿ ಅಧಿಕಾರ ಸ್ವೀಕರಿಸಿ ಮಾತನಾಡುತ್ತಾ ಪಂಚಾಯತಿಯಲ್ಲಿ ಸಿಬ್ಬಂದಿಗಳು ಸರಿಯಾಗಿ ಕರ್ತವ್ಯ ಪಾಲಿಸಬೇಕು,

ಸರಿಯಾದ ಸಮಯ ಹಾಗೂ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸಿ ತತಕ್ಷಣ ಪರಿಹರಿಸುವ ಕೆಲಸ ಮಾಡಬೇಕು, ಇನ್ನೇನು ಬೇಸಿಗೆ ಸಮೀಪಿಸಿದ್ದು ಕುಡಿಯುವ ನೀರಿನ ಪೂರೈಕೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ



ಹಳ್ಳಿ, ಕ್ಯಾಂಪ್ ಗಳಿಗೆ ಸರಿಯಾಗಿ ಪೂರೈಕೆ ಮಾಡುವ ಮೂಲಕ ಸಿಬ್ಬಂದಿಗಳು ಕೆಲಸ ಮಾಡಬೇಕೆಂದು ಹೇಳಿದರು. ನಂತರ ಪಿಡಿಓ ವಿಶ್ವನಾಥ ಹೂಗಾರ ಮಾತನಾಡಿ ನೂತನ ಆಡಳಿತ ಅಧಿಕಾ-ರಿಗಳ ಮಾರ್ಗದರ್ಶನದಲ್ಲಿ, ನಮ್ಮ ಎಲ್ಲಾ ಸಿಬ್ಬಂದಿಗಳ ಸಹಕಾರದೊಂದಿಗೆ ಗ್ರಾಮ ಪಂಚಾಯತಿ ಮಟ್ಟದ ಎಲ್ಲಾ ಹಳ್ಳಿಗಳ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಕೆಲಸ ಮಾಡಲಾಗುವುದು ಎಂದು ಪಿಡಿಓ ವಿಶ್ವನಾಥ ಹೂಗಾರ ಹೇಳಿದರು. ಈ ವೇಳೆಯಲ್ಲಿ ಕಾರ್ಯದರ್ಶಿ ಪರಣ್ಣ ಪಾಮನಕಲ್ಲೂರು, ರಂಗಪ್ಪ ಕಂಪ್ಯೂಟರ್ ಆಪರೇಟರ, ಗ್ಯಾನಪ್ಪ ಗ್ರಂಥಪಾಲಕ, ಶ್ರೀದೇವಿ, ಮೌಲಸಾಬ ಹಾಗೂ ಸಿಬ್ಬಂದಿಗಳು ಇದ್ದರು.

## ಲೆಕ್ಕದಲ್ಲಿ ಈಜಬೇಕು, ತಾಳೆನೋಡತಾ ತೇಲಬೇಕು ಗಣಿತ ಶಿಕ್ಷಕ ಶ್ರೀ ನಾಗರಾಜ. ಆಡಗಲ್ಲ

ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಸರಕಾರಿ ಪ್ರೌಢ ಶಾಲೆ, ಅನವಾಲ. ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಇವರು ಗಣಿತ ವಿಷಯದ ಸಂಪನ್ಮೂಲ ವ್ಯಕ್ತಿಗಳಾಗಿದ್ದು, ತಾಳಿಕೋಟಿಯ ಶ್ರೀ ಸಂಗಮೇಶ್ವರ ಪ್ರೌಢ ಶಾಲೆಯ 10 ನೇ ತರಗತಿಯ ವಿದ್ಯಾರ್ಥಿಗಳಿಗೆ ಒಂದು ದಿನದ ವಿಶೇಷ ಕಾರ್ಯಾಗಾರ ಗಣಿತ ವಿಷಯದ ಕುರಿತು ಮಕ್ಕಳಿಗೆ ವಿಷಯ ಸರಳಿಕರಣ ಮಾಡಿ,ಹಂತ ಹಂತವಾಗಿ ಲೆಕ್ಕಗಳನ್ನು ಬಿಡಿಸುವ, ತಾಳೆಕರಿಸುವ.

ಮತ್ತೆ ಬಿಡುಸುವ ಎಂಬ ಪರಿಕಲ್ಪನೆಯೊಂದಿಗೆ ಮಕ್ಕಳನ್ನು ಕಲಿಕೆಯಲ್ಲಿ ತಲ್ಲಿನರನ್ನಾಗಿ ಮಾಡುದಲ್ಲದೇ ಲೆಕ್ಕದಲ್ಲಿ ಈಜಬೇಕು, ತಾಳೆನೋಡೇತಾ ತೇಲಬೇಕು ಕೊಟ್ಟ ಸಮಯದಲ್ಲೇ ಉತ್ತರ ಪತ್ರಿಕೆ ಬಿಡಿಸಬೇಕು



ಎಂದು ವಿದ್ಯಾರ್ಥಿಗಳಿಗೆ ಮಾದರಿ ಪ್ರಶ್ನೆ ಪತ್ರಿಕೆ ಬಿಡುಸುವ ಮೂಲಕ ಸಮಯ ಪ್ರಜ್ಞೆ ಮೂಡಿಸಿದರು.ಈ ಸಂದರ್ಭದಲ್ಲಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಅಶೋಕ.ಕಟ್ಟಿ. ಶಿಕ್ಷಕರುಗಳಾದ ಬಿ.ಆಯ್. ಹಿರೇಹೊಳಿ. ಎಸ್.ವಿ. ಜಾಮಗೊಂಡಿ. ಗಣಿತ ಶಿಕ್ಷಕ ಎಚ.ಬಿ.ಪಾಟೀಲ. ಹತ್ತನೇ ತರಗತಿ ವರ್ಗ ಶಿಕ್ಷಕ ಎಸ್.ಸಿ.ಗುಡಗುಂಟಿ. ಎಮ್. ಎಸ್.ರಾಯಗೊಂಡ. ಎಸ್.ಬಿ.ಸಾಸನೂರ. ಉಪಸ್ಥಿತರಿದ್ದರು.

## ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಮೆರವಣಿಗೆಯಲ್ಲಿ ಕಲೆ, ಸಂಸ್ಕೃತಿ, ಪರಂಪರೆಯ ಮೆಲುಕು

ನೈಜ್ಯ ದೆಸೆ ನ್ಯೂಸ್

ರಾಯಚೂರು: ಫೆಬ್ರುವರಿ 05 (ಕರ್ನಾಟಕ ವಾರ್ತೆ): ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ನಿಮಿತ್ತ ಗುರುವಾರ ರಾಯಚೂರಿನ ಕರ್ನಾಟಕ ಸಂಘದ ಆವರಣದಿಂದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದವರೆಗೆ ನಡೆದ ವಿಜ್ರಂಭಣೆಯ ಮೆರವಣಿಗೆಯು ಈ ಭಾಗದ ಕಲೆ, ಸಂಸ್ಕೃತಿ, ಪರಂಪರೆಯ ಮೆಲುಕು ಹಾಕುವ ರೀತಿಯಲ್ಲಿ ವಿಜ್ರಂಭಣೆಯಿಂದ ನಡೆಯಿತು.

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ ಆರ್.ಪಾಟೀಲ ಅವರು ನಾಡ ದೇವತೆ ತಾಯಿ ಭುವನೇಶ್ವರಿ ದೇವಿಯ ಮೂರ್ತಿಗೆ ಪುಷ್ಪಾರ್ಪಿಸಿ, ಬಳಿಕ ಡೊಳ್ಳು ಬಾರಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕರಾದ ಬಸವನಗೌಡ ದದ್ದಲ್, ರಾಯಚೂರು ನಗರ ಕ್ಷೇತ್ರದ ಶಾಸಕರಾದ ಶಿವರಾಜ ಪಾಟೀಲ, ಜಿಲ್ಲಾ



ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಪಾಮಯ್ಯ ಮುರಾರಿ, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹೊಪಾತ್ರ ಸೇರಿದಂತೆ ಇತರೆ ಜನಪ್ರತಿನಿಧಿಗಳು, ವಿವಿಧ ಇಲಾಖೆಗಳ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಕರ್ನಾಟಕ ಸಂಘದ ಆವರಣದಿಂದ ಆರಂಭಗೊಂಡ ಮೆರವಣಿಗೆಯು ಬಂಗಾರ ಬಜಾರ್, ಡಾ.ಬಿ.ಆರ್.ಅಂಬೇಡ್ಕರ್ ವೃತ್ತ, ಬಸವೇಶ್ವರ ವೃತ್ತದ ಮಾರ್ಗವಾಗಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದವರೆಗೆ ಅದ್ದೂರಿಯಾಗಿ ನಡೆಯಿತು. ಮೆರವಣಿಗೆ ಸಾಗಿ ಬಂದ ರಸ್ತೆಯ ಇಕ್ಕೆಲಗಳಲ್ಲಿ ಜನರು ಕುತೂಹಲ ದಿಂದ ಮೆರವಣಿಗೆಯಲ್ಲಿ ಆಗಮಿಸುತ್ತಿದ್ದ ಕಲಾತಂಡಗಳ ಪ್ರದರ್ಶನವನ್ನು ವೀಕ್ಷಿಸಿ ಖುಷಿಪಟ್ಟರು. ರಾಯಚೂರು ಜಿಲ್ಲಾ ಉತ್ಸವದಲ್ಲಿ ವೈವಿಧ್ಯಮಯ ಕಲಾತಂಡಗಳ ಮೆರವಣಿಗೆಯು ಉತ್ಸವದ ಮೆರಗನ್ನು ಇನ್ನಷ್ಟು ಹೆಚ್ಚಿಸಿತು. ಮೆರವಣಿಗೆಯಲ್ಲಿ ಬಸವರಾಜ ಸಿಂಧನೂರು ಅವರಿಂದ ವೀರಗಾಸೆ,

ಅಂಬರೇಶ ಹಸಮಕಲ್ ಅವರಿಂದ ಹಗಲುವೇಷ, ದೇವರಾಜು ಅವರಿಂದ ಚಿಲಿಪಿಲಿ ಗೊಂಬೆ, ಹನುಮಂತ ಮಸ್ಕಿ ಅವರಿಂದ ಕೀಲುಕುದುರೆ, ಲಿಂಗರಾಜ ನೀರಮಾನ್ವಿ ಅವರಿಂದ ಡೊಳ್ಳು ಕುಣಿತ, ಶಾಂತರಾಜು ಆಶಾಪೂರ ಅವರಿಂದ ಜಾಂಜ್ ಮೇಳ, ಶಿವರಾಜ ರುದ್ರಾಕ್ಷಿ ದೇವದುರ್ಗ ಅವರಿಂದ ಹಗಲುವೇಷ, ಲಂಕೆಪ್ಪ ಆಮದಿಹಾಳ ಅವರಿಂದ ಕಣಿಹಲಗೆ, ಬಸವರಾಜ ಸಿರವಾರ ಅವರಿಂದ ಡೊಳ್ಳುಕುಣಿತ, ಪಂಪನಗೌಡ ಸಿಂಧನೂರು ಅವರಿಂದ ತಾಷಾರಾಂಡೋಲು, ಚಿನ್ನಪ್ಪ ಸಿಂಧನೂರು ಅವರಿಂದ ಹಗಲುವೇಷ, ಗದ್ದೆಪ್ಪ ಭಜಂತ್ರಿ ಆಮದಿಹಾಳ ಅವರಿಂದ ಶಹನಾಯಿ ವಾದನ, ತಮ್ಮಣ್ಣ ರಾಠೋಡ ದೇವದುರ್ಗ ಅವರಿಂದ ಲಂಬಾಣಿ ನೃತ್ಯ, ನಾಗೇಶ ಬೆಂಗಳೂರು ಅವರಿಂದ ಕೊಂಬುಕಹಳೆ, ಹನುಮಂತ್ರಾಯ ಅವರಿಂದ ಗೊರವ ಕುಣಿತ, ಮಾರೆಪ್ಪ ಆತಕೂರ ಅವರಿಂದ ತಮಟೆವಾದನ, ಹಣಮಂತ್ರ ಭಜಂತ್ರಿ ಅವರಿಂದ ನಾಸಿಕಡೊಳ್ಳು, ಮಹೇಶ ಕವಿತಾಳ ಅವರಿಂದ ಹಗಲುವೇಷ, ನೀಲಕಂಠ ಕಲಬುರಗಿ ಅವ-ರಿಂದ ಗೊಂಬೆ ಕುಣಿತ, ತಿಪ್ಪೇಸ್ವಾಮಿ ಚಿತ್ರದುರ್ಗ ಅವ-ರಿಂದ ಮಹಿಳಾ ಡೊಳ್ಳು, ಶ್ರೀಕಾಂತ ದಕ್ಷಿಣ ಕನ್ನಡ ಅವರಿಂದ ಕಂಗೀಲು ಕುಣಿತ, ಕೆ ವಸಂತಕುಮಾರ ಬಳ್ಳಾರಿ ಅವರಿಂದ ಕಹಳೆವಾದನ, ಮಹಾಂತೇಶ ಚಿತ್ರದುರ್ಗ ಅವರಿಂದ ಸೋಮನಕುಣಿತ, ಸಿ ವೀರೇಶ ವಿಜಯನಗರ ಅವರಿಂದ ನಂದಿಧ್ವಜ ಮತ್ತು ಸಮಾಳ, ವೀರಯ್ಯ ಹಿರೇಮಠ ಕೊಪ್ಪಳ ಅವರಿಂದ ಭದ್ರಕಾಳಿ ಕುಣಿತ, ಮೀನ್ನಾಕ್ಷಮ ದಾವಣಗೆರೆ ಅವರಿಂದ ಮಹಿಳಾ ವೀರಗಾಸೆ, ಕಲ್ಲಪ್ಪ ಹಂಚಿನಮನಿ ಧರವಾಡ ಅವ-ರಿಂದ ಜಗ್ಗಲಗಿ, ಶ್ರೀನಿವಾಸ ದಾವಣಗೆರೆ ಕೋಳಿಕುಣಿತ, ಮಹಾಂತೇಶ ವಾಲಿ ಕೊಣ್ಣೂರ ಕರಡಿಮಜಲು, ಮಲ್ಲಿಕಾರ್ಜುನ ಕೊಪ್ಪದ ಅವರಿಂದ ಡೊಳ್ಳುಕುಣಿತ ಕಲಾ ಪ್ರಕಾರಗಳ ಪ್ರದರ್ಶನವು ಆಕರ್ಷಣೀಯವಾಗಿ ನಡೆದು ಸಾರ್ವಜನಿಕರ ಗಮನ ಸೆಳೆದವು.

## ಸಾಹಿತ್ಯ ಸಿಂಚನ

ಎಣೆದ ಸುಳ್ಳು ಬಲೆಗೆ ಸಿಕ್ಕಿ
ಉಸಿರುಗಟ್ಟಿ ಚೀರಾಡಿದೆ
ಕುಣಿವೆ ತಪ್ಪು ನಿನ್ನದೆ ಇರಲು
ಮಂಕು ಕವಿದು ಹಾರಾಡಿದೆ

ಮನುಜ ಮತವು ಬೇಕು ಆಗ
ಆಗ ಬಲ್ಲೆ ಜನ ನಾಯಕ
ಕೋಪ ನಿನ್ನ ಸುಡದೆ ಬಿಡದು
ರಾಗ ಬರದ ಗಾಯಕ

ಜನರ ಪ್ರೀತಿ ಕಳೆದುಕೊಂಡೆ
ಏನು ಬಂತು ಅತ್ತರೆ
ಮನಕೆ ಅಂಜಿ ನಡೆಯದಾದೆ
ಕಸಕೆ ಹಣ್ಣು ಕೊಳೆತರೆ

ಹಟದ ಚಟವು ಒಳಿತು ಏನೊ
ಬಾಳು ಹಳಿಯ ತಪ್ಪದೆ
ಸೂತ್ರವಿರದ ಪಟದ ಹಾಗೆ
ದೇಹ ಚಟ್ಟವ ಅಪ್ಪದೆ

ಹೊಳೆಯ ನೀರಿಗೆ ಎದುರು ಈಜುತ
ಸುಮ್ಮನೇಕೆ ಮುಳುಗುವೆ
ಸುಳ್ಳು ನಂಜು ತೊರೆದು ನೋಡು

ತುಳಸಿದಾಸ ಬಿ ಎಸ್

## ಫೆ.7ರಂದು ಕೃಷಿ ವಿಶ್ವವಿದ್ಯಾಲಯದ ವೇದಿಕೆ 03 ಬಸವೇಶ್ವರ ಸಭಾಂಗಣದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಫೆಬ್ರವರಿ 05 (ಕರ್ನಾಟಕ ವಾರ್ತೆ): ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ–2026ರ ಅಂಗವಾಗಿ ನಗರದ ಕೃಷಿ ವಿವಿಯ ವೇದಿಕೆ 03 ಬಸವೇಶ್ವರ ಸಭಾಂಗಣದಲ್ಲಿ ಫೆಬ್ರವರಿ 07ರ ಬೆಳಿಗ್ಗೆ 11ರಿಂದ ಸಂಜೆ 4ವರೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.**

ಕಾರ್ಯಕ್ರಮದಲ್ಲಿ ಮಂಜೂಳ ಹಟ್ಟಿ ಅವರಿಂದ ಜಾನಪದ, ಶಂಕರಯ್ಯ ಸ್ವಾಮಿ ಮಟಮಾರಿ ಅವರಿಂದ ವಚನ ಸಂಗೀತ, ಮಲ್ಲಪ್ಪ ಮಸ್ಕಿ ಅವರಿಂದ ತತ್ವಪದ, ದೊಡ್ಡ ತಿಮ್ಮಪ್ಪ ಆರೋಲಿ ಅವರಿಂದ ಭಕ್ತಿಗೀತೆ, ಮೋನಮ್ಮ ರಾಯಚೂರು ಅವರಿಂದ ಸಂಗೀತ ಕಾರ್ಯಕ್ರಮ, ಅಂಬ್ರೇತ ನಗನೂರ ಯಾದಗಿರಿ ಅವರಿಂದ ಹಿಂದೂಸ್ಥಾನಿ ಸಂಗೀತ, ಗುರುನಾಥ ರಾಯಚೂರು ಅವರಿಂದ ಭಾವಗೀತೆಗಳು, ಅರುಣಾ ಪಾಟೀಲ ರಾಯಚೂರು ಅವರಿಂದ ಸಮೂಹ ನೃತ್ಯ, ಶಾಂತಮ್ಮ ಅವರಿಂದ ಬರ?ರ ಕಥೆ, ಮಾರುತಿ ಶಾಂತಪುರ ಲಿಂಗಸುಗೂರು ಅವರಿಂದ ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತ, ಮುನಿಯಪ್ಪ ಗೋನಾಳ ಅವರಿಂದ ತತ್ವಪದ, ವಿಜಯರಾವ್, ರಾಯಚೂರು ಅವರಿಂದ ಕನ್ನಡ ಗೀತ ಗಾಯನ, ಸುಹಾನಿ ದಾದಾಪೀರ ಮಂಜರ್ಲಾ ರಾಯಚೂರು ಅವರಿಂದ ತತ್ವಪದ ಗಾಯನ, ಅಮರೇಶ ಬಿ. ರಾಯಚೂರು ಅವ–ರಿಂದ ಜನಪದ ಸಂಗೀತ, ಜೈ ಕುಮಾರ ಮಡಿವಾಳ ಕಲಬುರಗಿ ಅವರಿಂದ ಮೂಗಿನಿಂದ ಕೊಳಲು, ಪಂಪಾಪತಿ ಹೂಗಾರ ರಾಯಚೂರು ಅವರಿಂದ ಜನಪದ ಸಂಗೀತ, ರೇಣುಕಾ ಮತ್ತು ತಂಡದಿಂದ ಸಮೂಹ ಗಾಯನ, ಜಾಕೋಬ ಕುರ್ಡಿ ಅವರಿಂದ ಜನಪದ ಸಂಗೀತ, ಶಿವಕುಮಾರ ಜಿ. ಮಹಾಂತ ಅವ–ರಿಂದ ಸುಗಮ ಸಂಗೀತ, ರಮೇಶ ರಾಂಪೂರ ರಾಯಚೂರು ಅವರಿಂದ ಸುಗಮ ಸಂಗೀತ, ಜ್ಯೋತಿ ಬೇಸ್ತವಾರಪೇಟ ರಾಯಚೂರು ಅವ–ರಿಂದ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ, ಬಸವರಾಜ ವಂದಲಿ ಮಾನವಿ ಅವ–ರಿಂದ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ, ಅಮರೇಶ ಪೂಜಾರಿ ವಲ್ಕಂದಿನ್ನಿ ಅವ–ರಿಂದ ಏಕದಾರಿ ಪದ (ದಾಸವಾಣಿ), ಹಣಮಂತ ಕುಮಾರ ಅವ–ರಿಂದ ಸುಗಮ ಸಂಗೀತ, ಮುನಿಸ್ವಾಮಿ ರಾಯಚೂರು ಅವರಿಂದ ಎಂ. ನರೇಂದ್ರ ಕುಮಾರ ರಾಯಚೂರು ಅವರಿಂದ ಭಕ್ತಿಗೀತೆ, ಶರಣಕುಮಾರ ಹೂಗಾರ ಕವಿತಾಳ ಅವರಿಂದ ತಬಲಾ ವಾದನ, ಮಹೇಶ ಬಾಬು ಸುರ್ವೆ ಕೊಪ್ಪಳ ಅವರಿಂದ ನೃತ್ಯ, ಜಯಪ್ಪ ಆಶಾಪೂರು ರಾಯಚೂರು ಅವರಿಂದ ತತ್ವಪದಗಳು, ನಾರಾಯಣ ಹಿರೆಕೋಳಚಿ ಅವರಿಂದ ಜಾನಪದ ಸಂಗೀತ, ಹುಲಿಗೆಮ್ಮ ಮತ್ತು ತಂಡದಿಂದ ಸಮೂಹ ನೃತ್ಯ, ಚನ್ನಬಸವಪ್ಪ ಗೊಲ್ಲರ ಸಿಂಧನೂರು ಅವರಿಂದ ಸುಗಮ ಸಂಗೀತ, ಸಿದ್ದಲಿಂಗಪ್ಪ ಗಬ್ಬೂರು ಅವರಿಂದ ವಚನ ಗಾಯನ, ರಾಮಣ್ಣ ಗಬ್ಬೂರು ಅವರಿಂದ ವಚನ ಗಾಯನ, ಭಾಗ್ಯಶ್ರೀ ಗಿರಿಜಾಲಿ ಸಿಂಧನೂರು ಅವರಿಂದ ಭರತನಾಟ್ಯ, ಡಿ. ಚಂದ್ರಶೇಖರ ರಾಯಚೂರು ಅವರಿಂದ ಭರತನಾಟ್ಯ, ಚನ್ನಪ್ಪ ಜಡೆಪ್ಪ ಗಲಗ ಅವ–ರಿಂದ ಭರತನಾಟ್ಯ, ಕಲ್ಲನಗೌಡ ವೆಂಕಟಾಪೂರು ಅವರಿಂದ ತತ್ವಪದ, ಗುರುರಾಜ ಕುಲಕರ್ಣಿ ರಾಯಚೂರು ಅವರಿಂದ ದಾಸವಾಣಿ, ವಾಣಿಶ್ರೀ ರಾಯಚೂರು ಅವರಿಂದ ಸಮೂಹ ದಾಸವಾಣಿ, ಆದಿತ್ಯ ನಾಯಕ ರಾಯಚೂರು ಅವರಿಂದ ಸುಗಮ ಸಂಗೀತ, ಸಮೀರಣ ಜೋಷಿ ರಾಯಚೂರು ಅವರಿಂದ ಭರತನಾಟ್ಯ, ಹನುಮಯ್ಯ ಪಿಲಿಗುಂಡಿ ಅವರಿಂದ ಹಿಂದುಸ್ತಾನಿ ಸಂಗೀತ, ಶ್ರೀಧರ ದೇಸಾಯಿ ಮಾನವಿ ಅವರಿಂದ ಜನಪದ ಸಮೂಹ ಗಾಯನ, ಸಣ್ಣಬೂದೆಪ್ಪ ಆಶಾಪೂರ ಅವರಿಂದ ಸುಗಮ ಸಂಗೀತ, ಲತಾ ಹೂಗಾರ ಅವ–ರಿಂದ ಜನಪದ, ಶರಣಬಸವ ತಾತ ರಾಂಪುರ್ ಅವರಿಂದ ಜನಪದ ಗಾಯನ ನಡೆಯಲಿವೆ. ಸಂಗನೌಡ ರಾಯಚೂರು ಹಾಗೂ ಮಂಜುನಾಥ ರಾಯಚೂರು ಅವರು ಕಾರ್ಯಕ್ರಮದ ನಿರೂಪಣೆ ಮಾಡಲಿದ್ದಾರೆ.

## ಆಯುಕ್ತರಾದ ಶ್ರೀ ಬಿ. ವೆಂಕಟ ಸಿಂಗ್ ಅವರ ಕಲಬುರಗಿ ಮತ್ತು ರಾಯಚೂರು ಜಿಲ್ಲಾ ಪ್ರವಾಸ ಕಾರ್ಯಕ್ರಮ



ನೈಜ್ಯ ದೆಸೆ ನ್ಯೂಸ್

ರಾಯಚೂರು: ಕಲಬುರಗಿ: ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮಾಹಿತಿ ಆಯುಕ್ತರಾದ

**(ಕಲಬುರಗಿ ಪೀಠ) ಶ್ರೀ ಬಿ. ವೆಂಕಟ ಸಿಂಗ್ ಅವರು ಫೆಬ್ರವರಿ 6 ಮತ್ತು 7, 2026 ರಂದು ರಾಯಚೂರು ಜಿಲ್ಲೆಯಲ್ಲಿ ಅಧಿಕೃತ ಪ್ರವಾಸ ಕೈಗೊಳ್ಳಲಿದ್ದಾರೆ.**

ಅವರ ಪ್ರವಾಸದ ವಿವರಗಳು ಈ ಕೆಳಗಿನಂತಿವೆ:

ಪ್ರವಾಸದ ವೇಳಾಪಟ್ಟಿ:

ಫೆಬ್ರವರಿ 06, 2026 (ಶುಕ್ರವಾರ): ಮಧ್ಯಾಹ್ನ 2:00 ಗಂಟೆಗೆ ಕಲಬುರಗಿಯಿಂದ ಹೊರಟು, ಸಂಜೆ 6:00 ಗಂಟೆಗೆ ರಾಯಚೂರಿಗೆ ತಲುಪಲಿದ್ದಾರೆ. ರಾಯಚೂರು ಜಿಲ್ಲೆಯ ಕೃಷಿ ಮೇಳ ಮತ್ತು ಎಡದೊರೆ ನಾಡು ಉತ್ಸವದಲ್ಲಿ ಭಾಗವಹಿಸಲಿದ್ದಾರೆ. ಅಂದು ರಾಯಚೂ–ರಿನಲ್ಲೇ ವಾಸ್ತವ್ಯ ಹೂಡಲಿದ್ದಾರೆ.

ಫೆಬ್ರವರಿ 07, 2026 (ಶನಿವಾರ): ಸಂಜೆ 4:00 ಗಂಟೆಗೆ ರಾಯಚೂರು ಜಿಲ್ಲಾ ಉತ್ಸವದಲ್ಲಿ ಸಂವಾದ ಗೋಷ್ಠಿ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ಮಾಹಿತಿ ಹಕ್ಕು ಕಾಯ್ದೆಯ (RTI) ಕುರಿತು ಸಾರ್ವಜನಿಕರಿಗೆ ತಿಳುವಳಿಕೆ ನೀಡಲಿದ್ದಾರೆ. ನಂತರ ರಾತ್ರಿ 7:00 ಗಂಟೆಗೆ ರಾಯಚೂ–ರಿನಿಂದ ನಿರ್ಗಮಿಸಿ, ರಾತ್ರಿ 10:00 ಗಂಟೆಗೆ ಕಲಬುರಗಿ ಕೇಂದ್ರ ಸ್ಥಾನಕ್ಕೆ ಮರಳಲಿದ್ದಾರೆ. ಈ ಪ್ರವಾಸದ ಕುರಿತು ಮಾಹಿತಿ ನೀಡಲು ಮಾನ್ಯ ರಾಜ್ಯ ಮಾಹಿತಿ ಆಯುಕ್ತರಿಂದ ನಿರ್ದೇಶಿಸಲ್ಪಟ್ಟಿದೆ ಎಂದು ಪ್ರಕಟಣೆ ತಿಳಿಸಿದೆ.

## ಡಾ ಪ್ರವೀಣ್ ಬಿರಾದಾರ್ ಗೆ 2026 ನೇ ಸಾಲಿನ "ಹೆಮ್ಮೆಯ ಕನ್ನಡಿಗ" ರಾಜ್ಯ ಪ್ರಶಸ್ತಿ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ತಾಳಿಕೋಟೆ ತಾಲೂಕಿನ ಬೇಕಿನಾಳ ಗ್ರಾಮದ ವರು ಕಲಬುರಗಿಯ ಜ್ಞಾನ ಶಾರದೆ ಅಕಾಡೆಮಿಯ ಅಧ್ಯಕ್ಷರು ಮತ್ತು" ಭಾರತೀಯ ಶಿಕ್ಷಣ ರತ್ನ ರಾಷ್ಟ್ರ ಪ್ರಶಸ್ತಿ " ಮತ್ತು" ಶಿಕ್ಷಣ ಸಿರಿ " ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ ಪ್ರವೀಣ್ ಬಿರಾದಾರ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಕರ್ನಾಟಕ ಸಾಧಕರ ಅಭಿವೃದ್ಧಿ ಮಂಡಳಿ ಟ್ರಸ್ಟ್ (ರಿ) ಸಹಯೋಗದಲ್ಲಿ 2026 ನೇ ಸಾಲಿನ " ಹೆಮ್ಮೆಯ ಕನ್ನಡಿಗ ರಾಜ್ಯ ಪ್ರಶಸ್ತಿ' ಗೆ ಭಾಜನರಾಗಿದ್ದಾರೆ.**



ಸ್ಥಳ ಸೀತಾರಾಮ್ ಶೆಟ್ಟಿ ಕಲಾ ಭವನ ಭೋರ್ಡ್ ಹೈ ಸ್ಕೂಲ್ ಹತ್ತಿರ ಕುಂದಾಪುರ ದಿನಾಂಕ:08–02–2026 ಕ್ಕೆ ಬೆಳಿಗ್ಗೆ 10ರಿಂದ ಮಧ್ಯಾಹ್ನ 3ಗಂಟೆದವರೆಗೆ. ಇವರ ಈ ಸಾಧನೆಗೆ ಆಕ್ಸ್ಫರ್ಡ್ ಪಾಟೀಲ್ ಇಂಗ್ಲಿಷ್ ಮೀಡಿಯಂ ಶಾಲೆ ನಾಗರಭಟ್ಟ ಅಧ್ಯಕ್ಷರು, ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳು ಮತ್ತು ಬ್ರಿಲಿಯಂಟ್ ಇಂಗ್ಲಿಷ್ ಮೀಡಿಯಂ ಶಾಲೆ ಮೈಲೇಶ್ವರ ತಾಳಿಕೋಟಿ ಅಧ್ಯಕ್ಷರು ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

## ಫೆ.7ರಂದು ಕೃಷಿ ವಿಶ್ವವಿದ್ಯಾಲಯದ ಮುಖ್ಯ ವೇದಿಕೆ 01ರಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಫೆಬ್ರವರಿ 05 (ಕರ್ನಾಟಕ ವಾರ್ತೆ): ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಂ–ಯುಕ್ತಾಶ್ರಯದಲ್ಲಿ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ–2026ರ ಅಂಗವಾಗಿ ನಗರದ ಕೃಷಿ ವಿವಿಯ ಮುಖ್ಯ ವೇದಿಕೆ 01ರಲ್ಲಿ ಫೆಬ್ರವರಿ 07ರಂದು ಸಂಜೆ 4ರಿಂದ ರಾತ್ರಿ 7ವರೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.**

ಕಾರ್ಯಕ್ರಮದಲ್ಲಿ ಅಂಬಯ್ಯ ನುಲಿ ಮಾನ್ವಿ ಅವರಿಂದ ವಚನ ಗಾಯನ, ನರಸಿಂಹಲು ಅಸ್ಕಿಹಾಳ ಅವರಿಂದ ಸುಗಮ ಸಂಗೀತ, ಸರಸ್ವತಿ ಹೆಚ್ ಅವರಿಂದ ಶಾಸ್ತ್ರೀಯ ಸಂಗೀತ, ಹನುಮಂತ್ ಕುಮಾರ ಚಿಕ್ಕ ಕೋಟೆಕಲ್ ಅವ–ರಿಂದ ತಬಲಾ ವಾದನ, ಪಂಡಿತ ಅಮರೇಶ್ ಗವಾಯಿಗಳು ಚಿಕ್ಕ ಕೋಟ್ನೆಕಲ್ ಅವ–ರಿಂದ ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತ, ನಾರಾಯಣಪ್ಪ ಮಾಡಸಿರವಾರ ಅವರಿಂದ ಜನಪದ ಗಾಯನ, ಸುಮಂಗಲಾ ಡಿ. ಮೈಸೂರು ಅವರಿಂದ ಹಿಂದುಸ್ಥಾನಿ ಶಾಸ್ತ್ರಿಯ ಸಂಗೀತ, ವಿಶ್ವನಾಥ ರಾಯಚೂರು ಅವರಿಂದ ಜನಪದ ಗೀತೆ, ಶ್ರೀನಿವಾಸ ಖಾನಪೂರ (ಶ್ಯಾಮ್) ಅವ–ರಿಂದ ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತ, ಸವಿತಾ ಅಮರೇಶ ನುಗಡೋಣಿ ಅವರಿಂದ ದಾಸವಾಣಿ, ವೇಣುಗೋಪಾಲ ವರಪ್ಪ ಅವರಿಂದ ದಾಸವಾಣಿ, ಜಯಪ್ಪ ಪಟ್ಟಿ ವಿಜಯನಗರ ಅವ–ರಿಂದ ಸಮೂಹ ನೃತ್ಯ, ನಾಗೇಂದ್ರ ವಂತಿ ನೃತ್ಯ ಕಲಾ ಸಂಘ ರಾಯಚೂರು ಅವರಿಂದ ಸಮೂಹ ನೃತ್ಯ, ಚಂದ್ರಶೇಖರ ರಾಯಚೂರು ಅವರಿಂದ ಸಮೂಹ ನೃತ್ಯ, ವಿಜಯಲಕ್ಷ್ಮೀ ಮೋನಿಕಾ ನೃತ್ಯಕಲಾ ಸಂಸ್ಥೆ ರಾಯಚೂರು ಅವರಿಂದ ಸಮೂಹ ನೃತ್ಯ, ಕೋಟ್ರೇಶ ಸಿಂಧನೂರು ಅವರಿಂದ ತೊಗಲು ಗೊಂಬೆಯಾಟ, ತಿಮ್ಮಪ್ಪ ಇಟೇಕರ ರಾಯಚೂರು ಅವರಿಂದ ಸುಗಮ ಸಂಗೀತ, ರಾಜಶೇಖರ ನುಲಿ ಅವರಿಂದ ಮೂಲಕಪ್ಪ ಹೆಚ್. ರಾಯಚೂರು ಅವ–ರಿಂದ ಕನ್ನಡ ಗೀತೆಗಳು ನಡೆಯಲಿವೆ. ಗೀತಾರಾಣಿ ರಾಯಚೂರು ಹಾಗೂ ಡಾ.ಬಿ.ವಿಜಯರಾಜೇಂದ್ರ ರಾಯಚೂರು ಅವರು ನಿರೂಪಣೆ ಮಾಡಲಿದ್ದಾರೆ.

## ಫೆ.07ರಂದು ಮುಖ್ಯ ವೇದಿಕೆಯಲ್ಲಿ ವಿಜಯ ಪ್ರಕಾಶ್, ಅಲ್‌ಬಿಕೆ, ಎಂ.ಜೆ.5 ತಂಡದಿಂದ ವಿಶೇಷ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ 2026ರ ಅಂಗವಾಗಿ ಫೆ.07ರಂದು ಕೃಷಿ ವಿಶ್ವವಿದ್ಯಾಲಯದ ಮುಖ್ಯ ವೇದಿಕೆಯಲ್ಲಿ ಸಂಜೆ 6.55 ರಿಂದ 7ರವರೆಗೆ ಫೈರ್ ಶೋ, ಸಂಜೆ 7.00 ರಿಂದ 7.30ರವರೆಗೆ ಎಂ.ಜೆ ತಂಡದಿಂದ ನೃತ್ಯ ಕಾರ್ಯಕ್ರಮ, ಸಂಜೆ 7.30 ರಿಂದ 9ವರೆಗೆ ಅಲ್ ಓಕೆ ತಂಡದವ–ರಿಂದ ಸಂಗೀತ ಕಾರ್ಯಕ್ರಮ,**

9ರಿಂದ 930ರವರೆಗೆ ಎಂ.ಜೆ. 5 ತಂಡದಿಂದ ಸಂಗೀತ ಕಾರ್ಯಕ್ರಮ, ರಾತ್ರಿ 9.30ರಿಂದ 11.10ರವರೆಗೆ ವಿಜಯ ಪ್ರಕಾಶ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಲಿವೆ.

## ಎಸ್ ಎಸ್ ವಿದ್ಯಾ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಎಚ್.ಎಸ್.ಪಾಟೀಲರಿಗೆ ಸನ್ಮಾನ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದಲ್ಲಿ ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಹಂಡೇ ವಜೀರ ಸಮಾಜದ ತಾಲೂಕ ಘಟಕದ ವತಿಯಿಂದ ಹಮ್ಮಿಕೊಂಡ 2026 ನೇ ಸಾಲಿನ ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಪಟ್ಟಣದ ಪ್ರತಿಷ್ಠಿತ ಎಸ್ ಎಸ್ ವಿದ್ಯಾ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಎಚ್.ಎಸ್.ಪಾಟೀಲ ಇವರನ್ನು ಶಿಕ್ಷಣ ಕ್ಷೇತ್ರದ ಸೇವೆಗಾಗಿ ಸನ್ಮಾನಿಸಿ ಗೌರವಿಸಲಾಯಿತು.**



ಪೂಜ್ಯರಾದ ಜಯಗುರು ಸಿದ್ದೇಶ್ವರ ಮಹಾಸ್ವಾಮಿಗಳು, ಗುರುಮಡಿವಾಳೇಶ್ವರ ಶಿವಾಚಾರ್ಯರು, ಶಿವಕುಮಾರ ಶ್ರೀಗಳು, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಾ.ಪ್ರಭುಗೌಡ ಲಿಂಗದಳ್ಳಿ, ಅಸ್ಕಿ ಫೌಂಡೇಶನ್ ಅಧ್ಯಕ್ಷ ಸಿ.ಬಿ.ಅಸ್ಕಿ, ಶಿಕ್ಷಕ ಎ.ಡಿ.ಗೋನಾಳ,ಮುತ್ತು ಬಿರಾದಾರ (ಚಬನೂರ), ಹ.ವ.ಸ. ತಾಳಿಕೋಟಿ ಘಟಕದ ಅಧ್ಯಕ್ಷ ರಾಮನಗೌಡ ಬಿರಾದಾರ ಹಾಗೂ ಗಣ್ಯಮಾನ್ಯರು ಇದ್ದರು.

## ಬಾಯಲ್ಲಿ ನೀರೂರಿಸುವ ಆಹಾರ ಮೇಳ :ವಿವಿಧ ಬಗೆಯ ತಿನಿಸುಗಳಿಗೆ ಮುಗಿಬಿದ್ದ ಜನ

# ಜಿಲೇಬಿ ಸವಿದು ಸಂಭ್ರಮಿಸಿದ ಜಿಲ್ಲಾ ಉಸ್ತುವಾರಿ ಸಚಿವ ಡಾ. ಶರಣಪ್ರಕಾಶ್ ಪಾಟೀಲ್

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಅಂಗವಾಗಿ ಇಲ್ಲಿನ ಕೃಷಿ ವಿಶ್ವವಿಶ್ವವಿದ್ಯಾಲಯ ಆವರಣದಲ್ಲಿ ವಿಶಾಲವಾದ ಪ್ರದೇಶದಲ್ಲಿ ಸ್ಥಾಪಿಸಲಾಗಿರುವ ಆಹಾರ ಮೇಳದ ಮಳಿಗೆಯಲ್ಲಿ ಉತ್ಸವದ ಮೊದಲ ದಿನವೇ ಬೆಳಿಗ್ಗೆಯಿಂದಲೇ ಇಲ್ಲಿನ ತಿಂಡಿ ತಿನಿಸುಗಳಿಗೆ ಜನ ಮುಗಿಬಿದ್ದ ಸವಿಯುವುದು ಕಂಡುಬಂದಿತು.**

ಆಹಾರ ಮೇಳವನ್ನು ಉದ್ಘಾಟಿಸಿದ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲರು ಮಳಿಗೆಯಲ್ಲಿ ತೆರೆಯಲಾಗಿದ್ದ ವಿವಿಧ ಬಗೆಯ ತಿಂಡಿ ತಿನಿಸುಗಳ ಮಳಿಗೆಗಳಿಗೆ ಖುದ್ದು ಭೇಟಿ ನೀಡಿ, ಪರಿಶೀಲಿಸಿದರು. ಮಹಿಳಾ ಸ್ವ ಸಹಾಯ ಸಂಘದ ಮಹಿಳೆಯೊಬ್ಬರು ಮಳಿಗೆಯಲ್ಲಿ ಆಗಷ್ಟೇ ತಯಾರಿಸಿದ್ದ ಜಿಲೇಬಿಯನ್ನು ಪಡೆದು, ರುಚಿ ನೋಡಿ, ಖುಷಿ ಪಟ್ಟರು. ಇವರೊಂದಿಗೆ ಮಳಿಗೆಗೆ ಆಗಮಿಸಿದ್ದ ವಿವಿಧ ಗಣ್ಯರು ಕೂಡ ಜಿಲೇಬಿಯ ಸವಿಯನ್ನು ಸವಿದರು.

ಬಳಿಕ ಆಹಾರ ಮಳಿಗೆಯಲ್ಲಿಯೇ ವಿಶೇಷವಾಗಿ ತಯಾರಿಸಲಾಗಿದ್ದ ಕೇಕ್



ಅನ್ನು ಕೂಡ ಕತ್ತರಿಸಿ, ಆಹಾರ ಮೇಳದ ಸಂಭ್ರವನ್ನು ಇಮ್ಮಡಿಗೊಳಿಸಿದರು. ಆಹಾರ ಮೇಳಕ್ಕೆ ಸಚಿವರೊಂದಿಗೆ ವಾಲ್ಮೀಕಿ ಅಭಿವೃದ್ಧಿ ನಿಗಮ ಅಧ್ಯಕ್ಷ ಬಸನಗೌಡ ದದ್ದಲ್, ರಾಯಚೂರು ನಗರ ಶಾಸಕ ಡಾ. ಶಿವರಾಜ ಪಾಟೀಲ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಪಾಮಯ್ಯ ಮುರಾರಿ, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ರಾಜಶೇಖರ ರಾಮಸ್ವಾಮಿ, ಜಿಲ್ಲಾಧಿಕಾರಿ ನಿತೀಶ್ ಕೆ., ಜಿ.ಪಂ. ಸಿಇಓ ಈಶ್ವರ ಕುಮಾರ್ ಕಾಂದು, ಎಸ್‌ಪಿ ಅರುಣಾಂಗ್ಶು ಗಿರಿ, ಕೃಷಿ ವಿವಿ ಕುಲಪತಿ ಡಾ. ಎಂ. ಹನುಮಂತಪ್ಪ, ಮಹಾನಗರಪಾಲಿಕೆ ಆಯುಕ್ತ ಜುಬಿನ್, ಮಹಾಪಾತ್ರ, ಎಪಿಎಂಸಿ ಅಧ್ಯಕ್ಷ ಮಲ್ಲಿಕಾರ್ಜುನ ಗೌಡ, ಉಪಾಧ್ಯಕ್ಷ ಬಶೀರ್ ಅಹ್ಮದ್ ಸೇರಿದಂತೆ ಹಲವು ಗಣ್ಯರು ಈ ವೇಳೆ ಉಪಸ್ಥಿತರಿದ್ದು, ವಿವಿಧ ಬಗೆಯ ಆಹಾರ,



ತಿಂಡಿ ತಿನಿಸು ಗಳ ಸವಿಯನ್ನು ಸವಿದರು.

ಆಹಾರ ಮೇಳದಲ್ಲಿ ಚಿಕ್ಕಮಗಳೂರು, ಗದಗ, ಮೈಸೂರು, ಬಾಗಲಕೋಟೆ, ಬೆಳಗಾವಿ, ಕಲಬುರ್ಗಿ ಸೇರಿದಂತೆ ಹಲವು ಜಿಲ್ಲೆಗಳಿಂದ ಆಗಮಿಸಿದ್ದ ಹಲವು ಬಗೆಯ ತಿಂಡಿ, ಖಾದ್ಯಗಳ ತಯಾರಕರು, ಮಳಿಗೆಯಲ್ಲಿ ತಮ್ಮ ತಿಂಡಿ ತಿನಿಸುಗಳನ್ನು ಇಲ್ಲಿ ಪರಿಚಯಿಸಿದ್ದಲ್ಲದೆ, ಜನರಿಗೆ ಸವಿಯಲೂ ನೀಡಿದರು. ಉತ್ಸವ ಆರಂಭಗೊಂಡ ಮೊದಲ ದಿನವೇ ಬೆಳಿಗ್ಗೆಯಿಂದಲೇ ಆಹಾರ ಮೇಳಕ್ಕೆ ಸಾಗರೋಪಾದಿ ಹರಿದುಬಂದ ಜನ ವಿವಿಧ ಬಗೆಯ ತಿನಿಸುಗಳನ್ನು ಸವಿದರು. ರಾಯಚೂರು ಜಿಲ್ಲೆಯೂ ಸೇರಿದಂತೆ ಅಕ್ಕಪಕ್ಕದ ಜಿಲ್ಲೆ, ತಾಲ್ಲೂಕುಗಳ ಜನರು ಕೂಡ ರಾಯಚೂರು ಉತ್ಸವವನ್ನು ಕಣ್ಣಾರೆ ಕಂಡು ಸಂಭ್ರಮಿಸಲು ಆಗಮಿಸುತ್ತಿದ್ದುದು ಕಂಡುಬಂದಿತು. ಹಲವು ಶಾಲೆಗಳ ಮಕ್ಕಳು ಕೂಡ ಉತ್ಸವದ ಸವಿ ಸವಿಯಲು ತಮ್ಮ ಶಾಲಾ ಶಿಕ್ಷಕರುಗಳೊಂದಿಗೆ ಆಹಾರ ಮೇಳಕ್ಕೂ ಭೇಟಿ ನೀಡಿ, ತಮಗಿಷ್ಟವಾದ ತಿಂಡಿ ತಿನಿಸುಗಳನ್ನು ಸವಿದರು.

ಆಹಾರ ಮೇಳದಲ್ಲಿ ಫಾಸ್ಟ್ ಫುಡ್ ತಿನಿಸುಗಳಿಂದ ಮೊದಲುಗೊಂಡು, ವಿವಿಧ ಬಗೆಯ ಹಣ್ಣುಗಳ ಜ್ಯೂಸ್ ಅಂಗಡಿಗಳು, ಮಂಡಾಳು ಒಗ್ಗರಣಿ, ಮಿರ್ಚಿ ಬಜ್ಜಿ, ಬದನೆಕಾಯಿ ಬಜ್ಜಿ, ಪಾಪ್ ಕಾರ್ನ್, ಗೋಬಿ ಮಂಚೂರಿ, ನೂಡಲ್ಸ್, ಆಂಧ್ರಾ ಸ್ವೀಟ್ಸ್, ನಾನಾ ಬಗೆಯ ಹಪ್ಪಳ, ಸಂಡಿಗೆ ಸೇರಿದಂತೆ ನಾಡಿನ ನಾನಾ ಭಾಗದಲ್ಲಿನ ತಿಂಡಿ ತಿನಿಸುಗಳು ಒಂದೇ ಸೂರಿನಡಿ ಜನರಿಗೆ ಲಭ್ಯವಾಗುವಂತೆ ಆಹಾರ ಮೇಳದಲ್ಲಿ ವ್ಯವಸ್ಥೆ ಗೊಳಿಸಲಾಗಿತ್ತು. ಆಹಾರ ಮೇಳದ ಮೊದಲ ದಿನವೇ ತಿಂಡಿ ತಿನಿಸುಗಳ ಮಳಿಗೆಗಳಲ್ಲಿ ಭರ್ಜರಿ ಸ್ಪಂದನೆ ದೊರೆತಿದ್ದು, ಒಳ್ಳೆಯ ವ್ಯಾಪಾರವಾಗಿದ್ದು ಕಂಡುಬಂದಿತು. ಉತ್ಸವ ಫೆ. 07 ರವರೆಗೂ ನಡೆಯಲಿದ್ದು, ಆಹಾರ ಮೇಳದಲ್ಲಿ ತಿಂಡಿ ತಿನಿಸುಗಳ ವ್ಯಾಪಾರಸ್ಥರಿಗೆ ಭರ್ಜರಿ ವ್ಯಾಪಾರವಾಗಿ, ಉತ್ತಮ ಲಾಭ ಕಂಡುಕೊಳ್ಳುವ ನಿರೀಕ್ಷೆ ಇದೆ.

## ನೇಮಕಾತಿ ಪ್ರಕಟಣೆ

ರೈಲ್ವೆ ನೇಮಕಾತಿ ಮಂಡಳಿಯು ಇತ್ತೀಚೆಗೆ ಲೆವೆಲ್ 1 (ಗ್ರೂಪ್ ಡಿ) ಹುದ್ದೆಗಳಿಗೆ 22195 ಅರ್ಹ ಮತ್ತು ಸಮರ್ಥ ಆಕಾಂಕ್ಷಿಗಳನ್ನು ನೇಮಿಸಿಕೊಳ್ಳಲು ಉದ್ಯೋಗ ಅಧಿಸೂಚನೆಯನ್ನು ಬಿಡುಗಡೆ ಮಾಡಿದೆ. ಆರ್‌ಆರ್‌ಬಿಯಲ್ಲಿ ಸರ್ಕಾರಿ ಉದ್ಯೋಗಗಳನ್ನು ಹುಡುಕುತ್ತಿರುವ ಅಭ್ಯರ್ಥಿಗಳು ಕೊನೆಯ ದಿನಾಂಕದ ಮೊದಲು (ಏಪ್ರಿಲ್ 2, 2026) ಅಧಿಕೃತ ವೆಬ್‌ಸೈಟ್ www.rrbapply.gov.in ಮೂಲಕ ಆನ್‌ಲೈನ್ ಅರ್ಜಿ ನಮೂನೆಯನ್ನು ಸಲ್ಲಿಸುವ ಮೂಲಕ ಈ ನೇಮಕಾತಿ ಅಧಿಸೂಚನೆಗೆ ಅರ್ಜಿ ಸಲ್ಲಿಸಬಹುದು. Railway recruitment 2026: 22,000 ಕ್ಕೂ ಹೆಚ್ಚು ರೈಲ್ವೆ ಗ್ರೂಪ್ ಡಿ ಹುದ್ದೆಗಳಿಗೆ ಬಂಪರ್ ನೇಮಕಾತಿ ಪ್ರಾರಂಭವಾಗಿದೆ 10 ನೇ ತರಗತಿ ಮತ್ತು ಐಟಿಐ ಪಾಸಾದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು More Details https://t.ly/0hJ2v ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಆರಂಭಿಕ ದಿನಾಂಕ: 31–01–2026. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 02–03–2026. ಅಧಿಕೃತ ವೆಬ್‌ಸೈಟ್: www.rrbapply.gov.in

1ನೇ ಪುಟದಿಂದ....

ಚರ್ಚಿಸಲು ಸಭೆಯಲ್ಲಿ ನಿರ್ಧರಿಸಲಾಗಿದೆ. ಗ್ಯಾರಂಟಿ ಯೋಜನೆಗಳಿಗೆ ಎಸ್‌ಇಪಿ, ಟಿಎಸ್‌ಪಿ ಹಣ ಬಳಕೆಯಾಗುವುದನ್ನು ತಪ್ಪಿಸಲು ಇದು ಉತ್ತಮ ಮಾರ್ಗವಾಗಿದೆ ಎಂದರು. ನಮ ಮೆಟ್ರೋ ಸಂಸ್ಥೆ ಸ್ವಾಯತ್ತವಾಗಿದೆ. ಅದರಲ್ಲೂ ಮೆಟ್ರೋ ಸಂಸ್ಥೆಯಲ್ಲಿ ಕೇಂದ್ರ ಸರ್ಕಾರದ ಪಾಲು ಇದೆ. ಮೆಟ್ರೋ ರೈಲು ನಿರ್ವಹಣೆಗಾಗಿ ರಚಿಸಲಾಗಿರುವ ಸಿಎಂಡಿ ಕೇಂದ್ರ ಸರ್ಕಾರದ ನಿರ್ದೇಶನದಂತೆ ಪ್ರಯಾಣ ದರ ಪರಿಷ್ಕರಣೆ ಮಾಡಿರಬಹುದು ಎಂದರು.ರಾಜ್ಯ ಸರ್ಕಾರ ದಿವಾಳಿಯಾಗಿದೆ, ಹೊಸ ಯೋಜನೆಗಳು ಘೋಷಣೆಯಾಗುವುದಿಲ್ಲ ಎಂದು ಬಜೆಟ್ ಮಂಡನೆಗೂ ಮುನ್ನವೇ ಲೇವಡಿ ಮಾಡುತ್ತಿರುವವರು ಬೇಜಾವಾಬ್ದಾರಿ ಜನ ಎಂದು ತರಾಟೆಗೆ ತೆಗೆದುಕೊಂಡರು. 2024–25ನೇ ಸಾಲಿಗೆ 3.97 ಲಕ್ಷ ಕೋಟಿ, 2025–26ನೇ ಸಾಲಿಗೆ 4.9 ಲಕ್ಷ ಕೋಟಿ ರೂಪಾಯಿ ಬಜೆಟ್ ಮಂಡಿಸಲಾಗಿತ್ತು. ಪ್ರತಿ ವರ್ಷದ ಬಜೆಟ್ ನಲ್ಲೂ ಶೇಕಡಾ 15 ರಷ್ಟು ಹೆಚ್ಚಳವಾಗುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಬಜೆಟ್‌ನಲ್ಲಿ ಈ ರೀತಿಯ ಏರಿಕೆ ಸಾಮಾನ್ಯ ಎಂದರು. ಸಚಿವ ಆರ್.ಬಿ.ತಿಮಾಪುರ್ ವಿರುದ್ಧ ಕೇಳಿ ಬಂದಿರುವ ಆರೋಪಕ್ಕೆ ಸೂಕ್ತ ಸಾಕ್ಷ್ಯಾಧಾರ ಒದಗಿಸಲು ವಿರೋಧ ಪಕ್ಷಗಳು ವಿಫಲವಾಗಿವೆ. ಯಾರೋ ಮಾತನಾಡಿರುವ ಆಡಿಯೋವನ್ನು ಸಿಡಿಯಲ್ಲಿ ತಂದು ಪ್ರಸ್ತಾಪ ಮಾಡಿದರೆ ಒಪ್ಪಲು ಸಾಧ್ಯವಿಲ್ಲ. ಸಚಿವ ಆರ್.ಬಿ.ತಿಮಾಪುರ್ ನಾನು ನೇರವಾಗಿ ಹಣ ಪಡೆದಿರುವುದು ಅಥವಾ ನನ್ನ ಕಚೇರಿಯಲ್ಲಿ ಲಂಚ ಪಡೆಯುವ ಮಾತುಕತೆಯಾಗಿದ್ದರೆ ಅದನ್ನು ಸಾಬೀತುಪಡಿಸಿ. ನಾನು ರಾಜೀನಾಮೆ ನೀಡಲು ಸಿದ್ಧನಿದ್ದೇನೆ. ಯಾರೋ ಮಾತನಾಡಿಕೊಂಡಿದ್ದರೆ ಅದರಲ್ಲಿ ನನ್ನ ಪಾತ್ರ ಏನಿರುತ್ತದೆ? ನಾನ್ಹೇಗೆ ಹೊಣೆಯಾಗುತ್ತೇನೆ ಎಂದು ತಿಮಾಪುರ ಪ್ರಶ್ನಿಸಿದ್ದಾರೆ. ವಿರೋಧ ಪಕ್ಷದವರು ಇದೇ ರೀತಿ ಪ್ರತಿದಿನ ಒಬ್ಬೊಬ್ಬ ಸಚಿವರ ವಿರುದ್ಧ ಸಿಡಿ ತರುತ್ತಾರೆ. ಅದನ್ನು ಒಪ್ಪಬೇಕಾ? ಎಂದು ಪ್ರಶ್ನಿಸಿದರು. ಕಾಂಗ್ರೆಸ್ ಕಚೇರಿಗಳ ನಿರ್ಮಾಣಕ್ಕೆ ನಿವೇಶನ ಹಂಚಿಕೆ ಮಾಡುತ್ತಿರುವುದು ಸರ್ಕಾರದ ತೀರ್ಮಾನ. ಬಿಜೆಪಿ ಅಧಿಕಾರದಲ್ಲಿದ್ದಾಗಲೂ ಕಚೇರಿಗಳಿಗೆ ನಿವೇಶನಗಳನ್ನು ಮಾಡಿಸಿಕೊಳ್ಳಲಾಗಿದೆ. ಇದು ವೈಯಕ್ತಿಕ ನಿರ್ಧಾರವಲ್ಲ. ಸರ್ಕಾರದ ತೀರ್ಮಾನ ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದಿನಿಂದ ಬಜೆಟ್ ಪೂರ್ವಭಾವಿ ಸಭೆ ಆರಂಭಿಸಿದ್ದಾರೆ. ಮೊದಲಿಗೆ ಗೃಹ ಇಲಾಖೆಯ ಬೇಡಿಕೆಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಅದರ ಬಗ್ಗೆ ಪ್ರಸ್ತಾವನೆಗಳನ್ನು ಸಿದ್ಧಪಡಿಸಿದ್ದೇವೆ. ಹೊಸ ನೇಮಕಾತಿ ಮತ್ತು ಪೊಲೀಸ್ ಠಾಣೆಗಳನ್ನು ನೀಡಬೇಕು ಎಂಬುದು ನಮ ಬೇಡಿಕೆಯಾಗಿದೆ ಎಂದರು. ವಿಬಿ ಜಿ ರಾಮ್ ಜಿ ಯೋಜನೆ ವಿರೋಧಿಸಿ ವಿಧಾನಮಂಡಲದಲ್ಲಿ ಕೈಗೊಂಡಿರುವ ನಿರ್ಣಯದ ಸಂವಿಧಾನ ಬಾಹಿರ ಅಲ್ಲ. ಚುನಾಯಿತ ಸರ್ಕಾರ ಬಹುಮತದಿಂದ ಅಂಗೀಕರಿಸುವ ನಿರ್ಣಯ ಹೇಗೆ ಅಕ್ರಮವಾಗುತ್ತದೆ? ಎಂದು ಪ್ರಶ್ನಿಸಿದರು.

## ಸಮಾಜ ಸೇವಕ ಡಾ.ಪ್ರಭುಗೌಡರಿಗೆ ಸನ್ಮಾನ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದಲ್ಲಿ ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಹಂಡೇ ವಜೀರ ಸಮಾಜದ ತಾಲೂಕ ಘಟಕದ ವತಿಯಿಂದ ಹಮ್ಮಿಕೊಂಡ 2026 ನೇ ಸಾಲಿನ ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ, ಸಮಾಜ ಸೇವಕ ಡಾ.ಪ್ರಭುಗೌಡ ಲಿಂಗದಳ್ಳಿ ಇವರನ್ನು ಸಮಾಜಮುಖಿ ಕಾರ್ಯಗಳಿಗಾಗಿ ಸನ್ಮಾನಿಸಿ ಗೌರವಿಸಲಾಯಿತು.**



ಪೂಜ್ಯರಾದ ಜಯಗುರು ಸಿದ್ದೇಶ್ವರ ಮಹಾಸ್ವಾಮಿಗಳು, ಗುರುಮಡಿವಾಳೇಶ್ವರ ಶಿವಾಚಾರ್ಯರು, ಶಿವಕುಮಾರ ಶ್ರೀಗಳು,ಅಸ್ಕಿ ಫೌಂಡೇಶನ್ ಅಧ್ಯಕ್ಷ ಸಿ.ಬಿ.ಅಸ್ಕಿ, ಬಿಜೆಪಿ ಮುಖಂಡ ಆರ್ ಎಸ್ ಪಾಟೀಲ ಕೂಚಬಾಳ,ಕಸಾಪ ಅಧ್ಯಕ್ಷ ಆರ್.ಎಲ್.ಕೊಪ್ಪದ, ಹ.ವ.ಸ.ತಾಳಿಕೋಟಿ ಘಟಕದ ಅಧ್ಯಕ್ಷ ರಾಮನಗೌಡ ಬಿರಾದಾರ ಹಾಗೂ ಗಣ್ಯಮಾನ್ಯರು ಇದ್ದರು.

# ಆರೋಗ್ಯ ರಕ್ಷಣೆಗೆ ಒಳ್ಳೆಯ ಆಹಾರ ಪದ್ಧತಿ ಅಗತ್ಯ: ಪಾಟೀಲ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಗರ್ಭಿಣಿ ಬಾಣಂತಿಯರು ಸಮತೋಲನ ಆಹಾರ ಸೇವನೆ ಮಾಡಬೇಕು ಒಂದೇ ರೀತಿಯ ಆಹಾರ ಪದಾರ್ಥಗಳನ್ನು ಸೇವನೆ ಮಾಡದೆ ವಿವಿಧ ರೀತಿಯ ಆಹಾರ ಪದಾರ್ಥಗಳನ್ನು ಮತ್ತು ಕಾಯಿ ಸೊಪ್ಪು, ತರಕಾರಿಗಳು, ಮೊಳಕೆ ಕಾಳು ಹಾಗೂ ಎಲ್ಲಾ ತರಕಾರಿಗಳನ್ನು ಸೇವನೆ ಮಾಡಬೇಕು ಎಂದು ಅಂಗನವಾಡಿ ಕಾರ್ಯಕರ್ತೆಯರ ಯೂನಿಯನ್ ಅಧ್ಯಕ್ಷೆ ನೀಲಮ್ಮಗೌಡತಿ ಪಾಟೀಲ ಹೇಳಿದರು.**

ಬುಧವಾರ ಪಟ್ಟಣದ ಭೋವಿ ವಡ್ಡರ ಓಣಿಯಲ್ಲಿರುವ ಅಂಗನವಾಡಿ ಕೇಂದ್ರದಲ್ಲಿ ಹಮ್ಮಿಕೊಂಡ ಗರ್ಭಿಣಿ ಬಾಣಂತಿಯರಿಗೆ ಮಾರ್ಗದರ್ಶನ ಸಭೆಯಲ್ಲಿ ಮಾತನಾಡಿದರು. ಸದೃಢ ಸಮಾಜದ ನಿರ್ಮಾಣ ಹಾಗೂ ದೇಶದ ಭವಿಷ್ಯವನ್ನು ಉಜ್ವಲ ಗೊಳಿಸಲು ತಾಯಂದಿರು ಸದೃಢ ಮಕ್ಕಳನ್ನು ಸಮಾಜಕ್ಕೆ ನೀಡಬೇಕಾಗಿದೆ ಈ ಉದ್ದೇಶಕ್ಕಾಗಿಯೇ



ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ ಇದರ ಸದುಪಯೋಗವನ್ನು ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಅಂಗನವಾಡಿ ಕೇಂದ್ರದ ಮೇಲ್ವಿಚಾರಕಿ ಸರೋಜಿನಿ ಪೂಜಾರಿ ಮಾತನಾಡಿ ಬಾಣಂತಿಯರು ಪ್ರೋಟೀನ್, ವಿಟಾಮಿನ್ ಹಾಗೂ ಕ್ಯಾಲ್ಸಿಯಂ ಇರುವ ಆಹಾರ ಪದಾರ್ಥಗಳನ್ನು ಹೆಚ್ಚಾಗಿ ಸೇವಿಸಬೇಕು. ಎಣ್ಣೆಯಲ್ಲಿ ಕರೆದ ಪದಾರ್ಥಗಳನ್ನು ಆದಷ್ಟು ವರ್ಜಿಸಬೇಕು, ಪೌಷ್ಟಿಕ ಆಹಾರ ಸೇವನೆಯಿಂದ ಮಾತ್ರ ತಾಯಿ ಮಗು ಆರೋಗ್ಯವಾಗಿರಲು ಸಾಧ್ಯ ಎಂದರು. ನಿವೃತ್ತ ಶಿಕ್ಷಕ ಹುಲಿಗೆಪ್ಪ ಕಟ್ಟಿಮನಿ ಮಾತನಾಡಿ ಒಂದು ಆರೋಗ್ಯಪೂರ್ಣ ಸಮಾಜದ ನಿರ್ಮಾಣದಲ್ಲಿ ತಾಯಂದಿರ ಪಾತ್ರ ಮಹತ್ವದ್ದಾಗಿದೆ ದೇಶದ ಭವಿಷ್ಯ ವಾಗಿರುವ ಮಕ್ಕಳು ಅವರ ಉದರದಲ್ಲಿ ಜನಿಸುತ್ತಾರೆ ಅವರು ತಮ್ಮ ಆರೋಗ್ಯದ ಕುರಿತು ಹೆಚ್ಚು ಕಾಳಜಿ ವಹಿಸಬೇಕು ಎಂದರು.

ಗಣ್ಯರಾದ ಹುಸೇನಬಾಷಾ ಜಮಾದಾರ ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯಕ್ರಮದಲ್ಲಿ ಎಚ್.ಕಟ್ಟಿಮನಿ, ನಾಗಪ್ಪ ಬಳವಾಟ, ಲಕ್ಷ್ಮೀಂಬಾಯಿ ಬಳವಾಟ, ಮಂಜುಳಾ ಕಟ್ಟಿಮನಿ, ಕಾಶಿಬಾಯಿ ಶರಣರ, ಗುರುಬಸಮ್ಮ ಮಠ, ಗಂಗು ಢವಳೇಶ್ವರ, ರೇಣುಕಾ ಕಬಾಡೆ, ವಿದ್ಯಾ ನಾಡಕರಣಿ, ದೇವಕ್ಕಿ ಬಡಿಗೇರ, ಅನಸೂಯಾ ಪತ್ತಾರ ಹಾಗೂ ವಾರ್ಡಿನ ಮಹಿಳೆಯರು ಇದ್ದರು.

# ಗ್ರಾಮ ಪಂಚಾಯಿತಿಗಳ ಅಧಿಕಾರ ಅವಧಿ ಮುಕ್ತಾಯ ಉಟುಕುನೂರು, ಪೋತ್ನಾಳ್ ಗ್ರಾಮ ಪಂಚಾಯಿತಗಳಿಗೆ ಭಾಗಯ್ಯ ನಾಯಕ ಆಡಳಿತಾಧಿಕಾರಿ ನೇಮಕ



ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲೂಕಿನ 17 ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರ ಅಧಿಕಾರ ಅವಧಿ ಫೆಬ್ರವರಿ 3ರಿಂದ 5ರವರೆಗೆ ಹಂತ ಹಂತವಾಗಿ ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ಆಡಳಿತಾತ್ಮಕ ನಿರಂತರತೆ ಕಾಪಾಡುವ ಉದ್ದೇಶದಿಂದ ತಾತ್ಕಾಲಿಕ ಆಡಳಿತಾಧಿಕಾರಿಗಳನ್ನು ನೇಮಕ ಮಾಡಲಾಗಿದೆ.**

ಉಟುಕುನೂರು ಹಾಗೂ ಪೋತ್ನಾಳ್ ಗ್ರಾಮ ಪಂಚಾಯಿತಿಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಮಾನ್ವಿ ಭಾಗಯ್ಯ ನಾಯಕ ಅವರು ಆಡಳಿತಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಗ್ರಾಮ ಪಂಚಾಯಿತಿಗಳ ಕಾರ್ಯಚಟುವಟಿಕೆಗಳು ನಿರಂತರವಾಗಿ ನಡೆಯುವಂತೆ ಜಿಲ್ಲಾಧಿಕಾರಿ ನಿತೀಶ್ ಕೆ ಅವರು ಜಿಲ್ಲೆಯ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಆಡಳಿತಾಧಿಕಾರಿಗಳಾಗಿ ನೇಮಿಸಿ ಆದೇಶ ಹೊರಡಿಸಿದ್ದಾರೆ. ಅದರಂತೆ ಅರೋಲಿ ಗ್ರಾಮ ಪಂಚಾಯಿತಿಗೆ ಪಿಡಬ್ಲ್ಯೂಡಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರನ್ನು, ಬ್ಯಾಗವಾಟ್ ಹಾಗೂ ಭೋಗವತಿ ಗ್ರಾಮಗಳಿಗೆ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರನ್ನು, ಚಿಕ್ಕೊಟ್ನೆಕಲ್ ಹಾಗೂ ಹಿರೇಕೊಟ್ನೆಕಲ್ ಗ್ರಾಮಗಳಿಗೆ ಆರ್‌ಡಬ್ಲ್ಯೂಎಸ್ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕರನ್ನು, ಜಾನೇಕಲ್ ಗ್ರಾಮಕ್ಕೆ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರನ್ನು,

ಕಪಗಲ್ ಗ್ರಾಮಕ್ಕೆ ಸಾಮಾಜಿಕ ಅರಣ್ಯ ಇಲಾಖೆಯ ವಲಯ ಅರಣ್ಯಾಧಿಕಾರಿಯನ್ನು, ಕುರುಡಿ ಗ್ರಾಮಕ್ಕೆ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಯನ್ನು, ನಕ್ಕುಂದಿ ಹಾಗೂ ಮದ್ಲಾಪುರ್ ಗ್ರಾಮಗಳಿಗೆ ಪ್ರಾದೇಶಿಕ ಅರಣ್ಯ ವಲಯಾಧಿಕಾರಿಯನ್ನು, ಸಂಗಾಪುರ ಗ್ರಾಮಕ್ಕೆ ಶಿಶು ಅಭಿವೃದ್ಧಿ ಯೋಜನೆ ಅಧಿಕಾರಿಯನ್ನು ಹಾಗೂ ಸಾದಾಪುರ ಮತ್ತು ಸುಂಕೇಶ್ವರ ಗ್ರಾಮಗಳಿಗೆ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯನ್ನು ಆಡಳಿತಾಧಿಕಾರಿಗಳಾಗಿ ನೇಮಿಸಲಾಗಿದೆ. ಮುಂದಿನ ಚುನಾವಣೆಗಳು ನಡೆಯುವವರೆಗೆ ನೇಮಕಗೊಂಡ ಆಡಳಿತಾಧಿಕಾರಿಗಳು ಸಂಬಂಧಿತ ಗ್ರಾಮ ಪಂಚಾಯಿತಿಗಳ ಆಡಳಿತ ಜವಾಬ್ದಾರಿಗಳನ್ನು ನಿರ್ವಹಿಸಲಿದ್ದಾರೆ.

# ಅಂಜುಮನ್–ಎ–ಮುಸ್ಲಿಮೀನ್ ಕಮಿಟಿ ಪದಾಧಿಕಾರಿಗಳ ಆಯ್ಕೆ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರ: ಫೆ,6 ತಾಲೂಕ ಅಂಜುಮನ್ – ಎ – ಮುಸ್ಲಿಮೀನ್ ಕಮಿಟಿ(ರಿ) ವತಿಯಿಂದ ಯರಗುಂಟಿ ಗ್ರಾಮದ ಮಸೀದಿಯಲ್ಲಿ ನಡೆದ ಸಭೆಯಲ್ಲಿ ತಾಲೂಕಿನ ಪದಾಧಿಕಾರಿಗಳ ಆಯ್ಕೆ ಕಾರ್ಯಕ್ರಮ ನಡೆಯಿತು ಅಂಜುಮನ್ – ಎ–ಮುಸ್ಲಿಮೀನ್ ಯರಗುಂಟಿ ಗ್ರಾಮದ ಕಮಿಟಿಯ ಗೌರವ ಅಧ್ಯಕ್ಷರಾಗಿ ಹುಸೇನ್ ಸಾಬ್ ಮುಲ್ಲಾರ,**

ಅಧ್ಯಕ್ಷರಾಗಿ ರಾಜಸಾಬ್



ಹುಡೇದ್, ಉಪಾಧ್ಯಕ್ಷರಾಗಿ ಇಸಾಕ್ ಸಾಬ್ ನವಲಿ, ಕಾರ್ಯಧ್ಯಕ್ಷರಾಗಿ ಸದ್ದಾಂ ಹುಸೇನ್, ಪ್ರಧಾನ ಕಾರ್ಯದರ್ಶಿಯಾಗಿ ಉಸ್ಮಾನ್ ಸಾಬ್ ಅಗಸಿಮುಂದಿನ, ಜಂಟಿ ಕಾರ್ಯದರ್ಶಿಯಾಗಿ ಶರೀಫ್ ಹೊಸಮನಿ, ಸದಸ್ಯರಾಗಿ ರಾಜಸಾಬ್, ಅಜೇಲಿ ಸಾಬ್, ಅಬ್ದುಲ್ಲಾ ಸಾಬ್, ಕಾಶೀಂಸಾಬ್, ಹೊನ್ನೀರ್ ಸಾಬ್, ಕರೀಂಸಾಬ್, ಕರೀಂಸಾಬ್ ದಿಡ್ಡಿ, ಇಸಾಕ್ ಸಾಬ್, ಶಾರುಖಾನ್, ಮುಯ್ಯ ಸಾಬ್ ಹಾಗೂ ಮಹ್ಮದ್ ರಫಿ ಇವರನ್ನ ಯರಗುಂಟಿ ಗ್ರಾಮದ ಸಮುದಾಯದವರ ಒಮ್ಮತದ ಅಭಿಪ್ರಾಯ ಮೇರೆಗೆ ಆಯ್ಕೆ ಮಾಡಲಾಯಿತು.

ಹಾಗೂ ಅಂಜುಮನ್–ಎ–ಮುಸ್ಲಿಮೀನ್ ಲಿಂಗಸಗೂರ ತಾಲೂಕು ಕಮಿಟಿಗೆ ಯರಗುಂಟಿ ಗ್ರಾಮದಿಂದ ಜನಾಬ್ ಹುಸೇನ್ ಸಾಬ್, ಜನಾಬ್ ಅಮೀರ್ ಸಾಬ್, ಜನಾಬ್ ರಹೇಮಾನ್ ಸಾಬ್, ಜನಾಬ್ ಖಾಸಿಂಸಾಬ್ & ಜನಾಬ್ ಯಮನೂರ ಸಾಬ್ ಇವರನ್ನ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆಯ್ಕೆ ಮಾಡಲಾಯಿತು ಈ ಸಂದರ್ಭದಲ್ಲಿ ಅಂಜುಮನ್–ಎ–ಮುಸ್ಲಿಮೀನ್ ಲಿಂಗಸಗೂರ ತಾಲೂಕು ಕಮಿಟಿಯ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ಯರಗುಂಟಿ ಗ್ರಾಮದ ಸಮುದಾಯದ ಗುರು ಹಿರಿಯರು ಸಹೋದರರು ಉಪಸ್ಥಿತರಿದ್ದರು.

# ಫೆ.07ರಂದು ಮಹಿಳಾ ಸಮಾಜ ಆವರಣದಲ್ಲಿ ದಾಸ ಸಾಹಿತ್ಯ ಗೋಷ್ಠಿ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಫೆಬ್ರವರಿ 05 (ಕರ್ನಾಟಕ ವಾರ್ತೆ): ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ–2026ರ ಅಂಗವಾಗಿ ಫೆಬ್ರವರಿ 07ರಂದು ಮಧ್ಯಾಹ್ನ 2.30ರಿಂದ 4ರವರೆಗೆ ನಗರದ ಜಿಲ್ಲಾ ಕಾರಾಗೃಹ ಹತ್ತಿರದ ಮಹಿಳಾ ಸಮಾಜ ಆವರಣದಲ್ಲಿ ದಾಸ ಸಾಹಿತ್ಯ ಗೋಷ್ಠಿ ನಡೆಯಲಿದೆ.**

**ಡಾ.ರವೀಂದ್ರ ಕುಷ್ಟಗಿ ಅವರು ಉದ್ಘಾಟನೆ**




ನೆರವೇರಿಸುವರು.

ಹರಿದಾಸ ಚಿಂತಕರು ಹಾಗೂ ದಾಸ ಸಾಹಿತ್ಯದ ಚಲನಚಿತ್ರ ನಿರ್ಮಾಪಕರಾದ ಡಾ. ತ್ರಿವಿಕ್ರಮ ಜೋಶಿ ಅವರು ಅಧ್ಯಕ್ಷತೆ ವಹಿಸುವರು. ರಾಯಚೂರು ತಹಶೀಲ್ದಾರ್ ಸುರೇಶ ವರ್ಮಾ, ಜಿಲ್ಲಾ ಕೇಂದ್ರ ಗ್ರಂಥಾಲಯದ ಮುಖ್ಯ ಅಧಿಕಾರಿ ಸಿದ್ಧಾರ್ಥ ಭಾವಿಕಟ್ಟೆ, ದೇವದುರ್ಗ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರಾದ ಎಚ್.ಶಿವರಾಜ ಅವರು ಗೌರವ ಉಪಸ್ಥಿತಿ ವಹಿಸುವರು. ದಾಸ ಸಾಹಿತ್ಯ ಗೋಷ್ಠಿಯಲ್ಲಿ ಕನ್ನಡ ಸಾಹಿತ್ಯಕ್ಕೆ ಹರಿದಾಸರ ಕೊಡುಗೆ ಕುರಿತು ಕಲ್ಲೂರಕರ ನಿವೃತ್ತ ಪ್ರಾಚಾರ್ಯರು ಹಾಗೂ ಸಾಹಿತಿಗಳಾದ ಡಾ.ರಾಜಶ್ರೀ ಅವರು ಉಪನ್ಯಾಸ ನೀಡುವರು. ದಾಸ ಸಾಹಿತ್ಯದಲ್ಲಿ ಸಾಮಾಜಿಕ ಮೌಲ್ಯಗಳು ಮತ್ತು ಪ್ರಸ್ತುತತೆ ಕುರಿತು ಹಿರಿಯ ಸಾಹಿತಿಗಳಾದ ಡಾ.ರೇಣುಕಾ ಎಂ.ಸ್ವಾಮಿ ಅವರು ಉಪನ್ಯಾಸ ನೀಡುವರು.

ದಾಸ ಸಾಹಿತ್ಯದ ಬೆಳವಣಿಗೆಯಲ್ಲಿ ಮಹಿಳೆಯರ ಕೊಡುಗೆ ಕುರಿತು ಹಿರಿಯ ಲೇಖಕಿ ಡಾ.ಮಧುಮತಿ ದೇಶಪಾಂಡೆ ಅವರು ಉಪನ್ಯಾಸ ನೀಡುವರು. ರಾಯಚೂರು ಜಿಲ್ಲೆಯ ಹರಿದಾಸರು ಕುರಿತು ರಾಯಚೂರಿನ ಕಾನೂನು ಮಹಾವಿದ್ಯಾಲಯದ ಉಪನ್ಯಾಸಕರಾದ ಡಾ.ವಸುಂಧರಾ ಪಾಟೀಲ ಅವರು ಉಪನ್ಯಾಸ ನೀಡುವರು. ಮುರಳೀಧರ ಕುಲಕರ್ಣಿ ಅವರು ನಿರೂಪಣೆ, ಶ್ರೀನಿವಾಸ ಗಟ್ಟು ಅವರು ಸ್ವಾಗತ ಹಾಗೂ ಜೆ.ಎಂ.ವಿರೇಶ್ ಅವರು ವಂದನಾರ್ಪಣೆ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ಉತ್ಸಾಹವಿಲ್ಲದ ಬದುಕಿಗೆ ಉತ್ಸವಗಳು ಬೇಕೆ

ನೈಜ್ಯ ದೆಸೆ ನ್ಯೂಸ್

**ಉತ್ಸವಗಳು ನಾಡಿನ ಇತಿಹಾಸವನ್ನು ಮರುಕಳಿಸುತ್ತವೆ ನಮ್ಮ ದೇಶದ ಸಂಸ್ಕೃತಿ ನಮ್ಮ ದೇಶದ ಆಚಾರ ವಿಚಾರಗಳು , ಜೀವನ ಶೈಲಿ, ಸಾಹಿತ್ಯ, ಜಾನಪದ, ಹಳ್ಳಿಯ ಸೊಗಡು ಹೀಗೆ ಒಂದಲ್ಲ ಹಲವು ಕ್ಷೇತ್ರದಲ್ಲಿನ ಇತಿಹಾಸವನ್ನು ಮರುಕಳಿಸುವ ಕಾರ್ಯ ಉತ್ಸವಗಳಿಂದ ಆಗುತ್ತದೆ ಉತ್ಸವ ಮಾಡುವುದು ನಮಗೂ ಹೆಮ್ಮೆ ಇದೆ ಆದರೆ ಸಾರ್ವಜನಿಕರಿಗೆ ನೆಮ್ಮದಿಯ ಬದುಕು ಇಲ್ಲದಾಗ ಈ ಉತ್ಸವಗಳನ್ನು ಮಾಡುವುದು ಎಷ್ಟು ಸರಿ ಎಂಬುದು ಸಾರ್ವಜನಿಕರ ಅಳಲಾಗಿದೆ.**

ಉತ್ಸವ ಎಂದರೆ ಹಬ್ಬ, ಸಂಭ್ರಮ, ಸಮಾರಂಭ ಎಂದು ಹಾಗೆಯೇ ಧಾರ್ಮಿಕ,ಸಾಂಸ್ಕೃತಿಕ ಸಮಾರಂಭಗಳೂ ಎಂತಲು ಕರೆಯಲಾಗುತ್ತದೆ ಆದರೆ ನಮ್ಮ ಹಳ್ಳಿಯ ಸೊಗಡಿನಲ್ಲಿ ಹೇಳುವುದಾದರೆ ಉತ್ಸವಗಳು ಎಂದರೆ ಅದೊಂದು ರೀತಿಯ ,ಖುಷಿ ಮತ್ತು ಸಂತೋಷ ಆದರೆ ಈ ಖುಷಿ, ಸಂತೋಷಗಳು, ಇದ್ದಾಗ ಮಾತ್ರ ಇಂತಹ ಉತ್ಸವಗಳನ್ನು ಆಚರಣೆ ಮಾಡಿದರೆ ನಾವು ಸಂಪೂರ್ಣವಾಗಿ ಖುಷಿಯನ್ನು ಅನುಭವಿಸಲು ಸಾಧ್ಯ ಆದರೆ ಇದು ಸಂದರ್ಭ ಅಲ್ಲ ರೈತನಿಗೆ ಎರಡನೇ ಬೆಳೆಗೆ ನೀರಿಲ್ಲ ಮೊದಲ ಬೆಳೆದ ಬೆಳೆಗೆ ಬೆಳೆಯು ಇಲ್ಲ ಇಂತಹ ಪರಿಸ್ಥಿತಿಯಲ್ಲಿ ರೈತ ಕಂಗಾಲಾಗಿ ಬೆಂಗಳೂರು, ಬಾಂಬೆ, ಪುನಾ, ಎಂದು ಗುಳೆ ಹೊರಟಿದ್ದಾರೆ.

ಇಂತಹ ಸಂದರ್ಭದಲ್ಲಿ ನಮಗ್ಯಾಕಪ್ಪ ಉತ್ಸವ ಎಂದು ರೈತರು, ಜನಸಾಮಾನ್ಯರು ,ಬಡವರು, ನಿರುದ್ಯೋಗಿಗಳು, ತಮ್ಮ ಅಳಲನ್ನು ತೋಡಿಕೊಳ್ಳುತ್ತಿದ್ದಾರೆ. ಹೌದು ರೈತ ಈ ದೇಶದ ಬೆನ್ನೆಲುಬು, ರೈತ ಈ ದೇಶದ ಕಣ್ಣು, ರೈತ ಸುಖವಾಗಿದ್ದರೆ ನಾವೆಲ್ಲ ಸುಖವಾಗಿರುತ್ತವೆ ಎಂಬ ಬಿಂಕದ ಭಾಷಣಗಳು ನಿಜ ಜೀವನದಲ್ಲಿ ಅಳವಡಿಕೆಯಾಗುತ್ತಿಲ್ಲ. ರೈತನಿಗೆ ಸುಮಾರು ಎರಡು ಮೂರು ಬೆಳೆಗಳಾದವು ತುಂಬಾ ನಷ್ಟವನ್ನು ಅನುಭವಿಸುತ್ತಿದ್ದಾನೆ, ಸರಿಯಾದ ಇಳುವರಿಯೇ ಇಲ್ಲ ಬಂದ ಇಳುವರಿಗೆ ಬೆಲೆಯೂ ಇಲ್ಲ ಆದರೆ ರಸಾಯನಿಕ ಗೊಬ್ಬರಗಳ ಬೆಲೆ ಗಗನಕ್ಕೇರಿವೆ ಮೊದಲ ಬೆಳೆ ಬೆಳೆಯುವಾಗ ರೈತನಿಗೆ ಎಷ್ಟೆಲ್ಲಾ ತೊಂದರೆಗಳು ಬಂದು ಸರಿಯಾದ ಇಳುವರಿ




ಬರಲಿಲ್ಲ ಬಂದ ಇಳುವರಿಗೆ ಬೆಲೆಯೂ ಇಲ್ಲ ಹಾಗಾಗಿ ರೈತ ಬೆಳೆಗಳನ್ನು ಬೆಳೆಯಲಿಕ್ಕೆ ಮಾಡಿದ ಸಾಲವನ್ನು ತೀರಿಸಲಾಗದೆ ಕಣ್ಣೀರಿಂದ ಕೈ ತೊಳೆದು

"ಬಂದ ದಾರಿಗೆ ಸುಂಕವಿಲ್ಲ"ಎಂದು ಹೊಲಗದ್ದೆಗಳನ್ನು ಬಿಟ್ಟು ಬೆಂಗಳೂರು, ಬಾಂಬೆ, ಪುನಾ ಗುಳೆ ಹೊರಟಿದ್ದಾನೆ ಬೆಳೆ ಬೆಳೆಯಲಿಕ್ಕೆ ಮಾಡಿದ ಸಾಲಕ್ಕೆ ಗುರಿಯಾಗಿ ಹೇಗಾದರೂ ಮಾಡಿ ಮಾಡಿದ ಸಾಲ ಮುಟ್ಟಿಸಬೇಕೆಂದು ಕುಟುಂಬವನ್ನೇ ತೊರೆದು ಸಣ್ಣ ಸಣ್ಣ ಮಕ್ಕಳನ್ನು , ವೃದ್ಧರನ್ನು ಮನೆಯಲ್ಲಿ ಬಿಟ್ಟು ದುಃಖದಿಂದ ದುಡಿಯಲಿಕ್ಕೆ ಹೋಗುತ್ತಿದ್ದಾನೆ. ಮನೆಯಲ್ಲಿರುವ ಮಕ್ಕಳ ಗೋಳು ಕೇಳುವವರಾರು ಮನೆಯಲ್ಲಿರುವ ವೃದ್ಧರ ಗೋಳು ಕೇಳುವವರಾರು ಇಂತಹ ಪರಿಸ್ಥಿತಿಯಲ್ಲಿ ಉತ್ಸವಗಳು ನಮಗ್ಯಾಕೆ ಬೇಕು ಎಂದು ರೈತ ತಮ್ಮ ಅಳಲನ್ನು ತೋಡಿಕೊಳ್ಳುತ್ತಿದ್ದಾನೆ. ಈ ರೀತಿಯ ರೈತನ, ಬಡವನ ಪರಿಸ್ಥಿತಿಯನ್ನು ಕಂಡು ಕಾಣದಂತೆ ಉತ್ಸವಗಳನ್ನು ಆಚರಿಸುವುದು ಎಷ್ಟು ಸರಿ ಇದನ್ನು ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯತೆ ಮತ್ತು ಅನಿವಾರ್ಯತೆ ಇದೆ.

ನಷ್ಟವನ್ನು ಅನುಭವಿಸಿದ ರೈತರ ಖಾತೆಗೆ ಇಂತಿಷ್ಟು ಹಣ ಹಾಕಿದ್ದರೆ ಅವರ ಜೀವನವು ಸ್ವಲ್ಪ ನೆಮ್ಮದಿಯಾಗಿರುತ್ತಿತ್ತು ಆಗ ರೈತನಿಗೆ ಖುಷಿ ,ಸಂತೋಷ, ಸಿಗುತ್ತಿತ್ತು ಆಗ ಅದುವೇ ಹಬ್ಬ ,ಉತ್ಸವವಾಗಲು ಸಾಧ್ಯವಾದೀತು ಆ ನಿಟ್ಟಿನಲ್ಲಿ ಸರ್ಕಾರ ಆಲೋಚನೆ ಮಾಡುವ ಅವಶ್ಯಕತೆ ಇತ್ತು ಹಸಿದವನಿಗೆ ಅನ್ನ ನೀಡದೆ ಉತ್ಸವಗಳನ್ನು ಮಾಡಿದರೆ ಉತ್ಸವದ ಉತ್ಸಾಹ ಜನರಲ್ಲಿ ಬಂದೀತೆ ಎಂಬುದನ್ನು ವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ಹಾಗೆಯೇ ನಿರುದ್ಯೋಗ, ಬಡತನ ಮತ್ತು ರೈತನ ಸಮಸ್ಯೆಗಳನ್ನು ಹೋಗಲಾಡಿಸಲು ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಉದ್ಯೋಗವನ್ನಾದರೂ ಕೊಟ್ಟು ಇವರೆಲ್ಲರ ಜೀವನದಲ್ಲಿ ಸ್ವಲ್ಪ ನೆಮ್ಮದಿ ಕೊಡಬಹುದಿತ್ತು ಆಗ ಅದು ಖುಷಿ, ಸಂತೋಷ,

ಉತ್ಸವ ವಾಗಲು ಸಾಧ್ಯವಾಗುತ್ತಿತ್ತು ಸಾರ್ವಜನಿಕರು ನೆಮ್ಮದಿಯಾಗಿದ್ದರೆ ಅದಕ್ಕಿಂತ ಉತ್ಸವ ಬೇರೊಂದಿಲ್ಲ "ಹೊಟ್ಟೆಗೆ ಹಿಟ್ಟಿಲ್ಲದೆ ಜುಟ್ಟಿಗೆ ಮಲ್ಲಿಗೆ ಯಾತಕ್ಕೆ" ಎನ್ನುವಂತಾಯಿತು ಪರಿಸ್ಥಿತಿ. ಈಗಲಾದರೂ ಸರ್ಕಾರ ಎಚ್ಚೆತ್ತುಕೊಂಡು ಸಾರ್ವಜನಿಕರ ಅಳಲನ್ನು ಅರ್ಥೈಸಿಕೊಂಡು ಸಾರ್ವಜನಿಕರ ಹಿತಾಸಕ್ತಿಗೆ ತಕ್ಕಂತೆ ಅವರು ಸುಖ ಶಾಂತಿ ನೆಮ್ಮದಿಯಿಂದ ಇರಲು ಉತ್ತಮ ಯೋಜನೆಗಳನ್ನು ಜಾರಿಗೆ ತಂದರೆ ಆಗ ಅದು ಹಬ್ಬವಾಗಿ,ಹಬ್ಬವು ಉತ್ಸವವಾಗಲು ಸಾಧ್ಯವಾದೀತು ಎಂಬುದನ್ನು ಮನದಲ್ಲಿಟ್ಟುಕೊಂಡು ಕಾರ್ಯಗಳನ್ನು ನಿರ್ವಹಿಸಿದರೆ ಅದಕ್ಕಿಂತ ಬೇರೊಂದು ಉತ್ಸವವಿಲ್ಲ ಆ ನಿಟ್ಟಿನಲ್ಲಿ ಸರ್ಕಾರ ಪ್ರಯತ್ನಿಸಲಿ.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ವೆಟರ್ನರಿ ಸೈನ್ಸ್ ಪಿಎಚ್‌ಡಿ

( Veterinary Science) ನಲ್ಲಿ ಪಿಎಚ್‌ಡಿ (Ph.D.) .ಕೋರ್ಸ್ ಅವಲೋಕನ (ಅಂಣಢಿಜ ಔತಜಡಿತುಜತಿ) ಡಾಕ್ಟರ್ ಆಫ್ ಫಿಲಾಸಫಿ (ಪಿ.ಎಚ್.ಡಿ.) ಇನ್ ವೆಟರ್ನರಿ ಸೈನ್ಸ್ [Doctor of Philosophy (Ph.D.) in Veterinary Science] ಅವಧಿ: ಸಾಮಾನ್ಯವಾಗಿ 3 ರಿಂದ 5 ವರ್ಷಗಳು (ಸಂಶೋಧನಾ ಕಾರ್ಯ ಮತ್ತು ಸಂಸ್ಥೆಯ ಮಾರ್ಗಸೂಚಿಗಳನ್ನು ಅವಲಂಬಿಸಿರುತ್ತದೆ). ವಿಶ್ವವಿದ್ಯಾಲಯ: ಕರ್ನಾಟಕದಲ್ಲಿ ಮುಖ್ಯವಾಗಿ ಕರ್ನಾಟಕ ವೆಟರ್ನರಿ, ಅನಿಮಲ್ ಅಂಡ್ ಫಿಶರೀಸ್ ಸೈನ್ಸಸ್ ಯೂನಿವರ್ಸಿಟಿ (KVAFSU), ಬೀದರ್ ಈ ಕೋರ್ಸ್ ಅನ್ನು ನೀಡುತ್ತದೆ. ಅರ್ಹತೆ (Eligibility) ಮಾಸ್ಟರ್ಸ್ ಪದವಿ (Master's Degree): ಅಭ್ಯರ್ಥಿಗಳು ಸಂಬಂಧಿತ ವಿಭಾಗದಲ್ಲಿ ಮಾಸ್ಟರ್ ಆಫ್ ವೆಟರ್ನರಿ ಸೈನ್ಸ್ (M.V.Sc.) ಅಥ–'ವಾ ತತ್ಸಮಾನ ಪದವಿಯನ್ನು ಹೊಂದಿರಬೇಕು. ಕನಿಷ್ಠ ಅಂಕಗಳು: ಮಾಸ್ಟರ್ಸ್ ಪದವಿಯಲ್ಲಿ ಕನಿಷ್ಠ 55% ಅಂಕಗಳು ಅಥವಾ 10ಕ್ಕೆ 7.5 OGPA (ಪರಿಶಿಷ್ಟ ಜಾತಿ/ಪಂಗಡದವ–ರಿಗೆ 7.0/10) ಹೊಂದಿರಬೇಕು. ಪ್ರವೇಶ ಪರೀಕ್ಷೆ: ಪ್ರವೇಶವು ಮೆರಿಟ್ (MVSc ಅಂಕಗಳು) ಅಥವಾ KVAFSU/ICAR ನಡೆಸುವ ಪ್ರವೇಶ ಪರೀಕ್ಷೆಯ ಆಧಾರದ ಮೇಲೆ ಇರುತ್ತದೆ. ವಿಶೇಷತೆಗಳು (Specializations) ಪಿಎಚ್‌ಡಿ ಪ್ರೋಗ್ರಾಂ ವಿವಿಧ ವಿಭಾಗಗಳಲ್ಲಿ ಲಭ್ಯವಿದೆ, ಅವುಗಳೆಂದರೆ: ವೆಟರ್ನರಿ ಮೆಡಿಸಿನ್ (Veterinary Medicine) ಅನಿಮಲ್ ನ್ಯೂಟ್ರಿಷನ್ (Animal Nutrition) ವೆಟರ್ನರಿ ಪ್ಯಾಥಾಲಜಿ (Veterinary Pathology) ಅನಿಮಲ್ ಜೆನೆಟಿಕ್ಸ್ ಅಂಡ್ ಬ್ರೀಡಿಂಗ್ (Animal Genetics and Breeding) ವೆಟರ್ನರಿ ಸರ್ಜರಿ ಅಂಡ್ ರೇಡಿಯಾಲಜಿ (Veterinary Surgery and Radiology) ಪ್ರಮುಖ ಕಾಲೇಜುಗಳು (KVAFSU ಅಡಿಯಲ್ಲಿ) ವೆಟರ್ನರಿ ಕಾಲೇಜು, ಬೆಂಗಳೂರು (Hebbal) ವೆಟರ್ನರಿ ಕಾಲೇಜು, ಬೀದರ್ ವೆಟರ್ನರಿ ಕಾಲೇಜು, ಶಿವಮೊಗ್ಗ ವೆಟರ್ನರಿ ಕಾಲೇಜು, ಹಾಸನ ಪ್ರವೇಶ ಪ್ರಕ್ರಿಯೆ (Admission Process) KVAFSU ನ ಅಧಿಕೃತ ವೆಬ್‌ಸೈಟ್ (kvafsu.edu.in) ನಲ್ಲಿ ಆನ್‌ಲೈನ್ ಅಪ್ಲಿಕೇಶನ್ ಭರ್ತಿ ಮಾಡಬೇಕು. ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನ ಅಥವಾ ಪ್ರವೇಶ ಪರೀಕ್ಷೆ ಇರುತ್ತದೆ.

### ಫೆ.07ರಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮುಖ್ಯ ವೇದಿಕೆಯಲ್ಲಿ ಚಿತ್ರಕಲಾ ಉತ್ಸವ ಕಾರ್ಯಕ್ರಮಗಳು

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಫೆಬ್ರವರಿ 05 (ಕರ್ನಾಟಕ ವಾರ್ತೆ): ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ನಿಮಿತ್ತ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮುಖ್ಯ ವೇದಿಕೆಯಲ್ಲಿ ಫೆ.07ರಂದು ಚಿತ್ರಕಲಾ ಉತ್ಸವ ನಡೆಯಲಿದೆ.**

ಚಿತ್ರಕಲಾ ಉತ್ಸವದಲ್ಲಿ ಹಿರಿಯ ಚಿತ್ರ ಕಲಾವಿದರಾದ ಪಿ.ಎ.ಬಿ.ಈಶ್ವರ, ರಾಮಣ್ಣ ಮ್ಯಾದಾರ್, ಚಿತ್ರಕಲಾ ಶಿಕ್ಷಕರಾದ ಸುಭಾಷ, ಕೆ.ಮಲ್ಲಿಕಾರ್ಜುನ, ಪಿ.ಎನ್. ಕುಮಾರ, ಚಿತ್ರ ಕಲಾವಿದರಾದ ಮಲ್ಲಿಕಾರ್ಜುನ್ ಆಲುರ್, ಗೋಪಿ ಸಿ.ಹೆಚ್, ಅಮರೇಶ ಬಾಳಪ್ಪ, ಸುರೇಶ ಕೆ. ಅವರು ಭಾಗಿಯಾಗಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಅಂಗವಾಗಿ ಕೃಷಿಮೇಳ

ನೈಜ್ಯ ದೆಸೆ ನ್ಯೂಸ್



**ರಾಯಚೂರು: ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಅಂಗವಾಗಿ ಇಲ್ಲಿನ ಕೃಷಿ ವಿಶ್ವವಿಶ್ವವಿದ್ಯಾಲಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿರುವ ಕೃಷಿ ಮೇಳಕ್ಕೆ ರೈತ–ರಿಂದ ಅಭೂತಪೂರ್ವ ಸ್ಪಂದನೆ ದೊರೆಯುತ್ತಿದೆ. ಕೃಷಿ ಮೇಳಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಶರಣಪ್ರಕಾಶ ಪಾಟೀಲ ಚಾಲನೆ ನೀಡಿದರು.**

ಕೃಷಿ ಮೇಳದಲ್ಲಿ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವೆಗಳ ಇಲಾಖೆ ಸೇರಿದಂತೆ ರೈತರಿಗೆ ಸಂಬಂಧಿಸಿದ ಹಲವಾರು ಇಲಾಖೆಗಳು ಮಳಿಗೆಗಳನ್ನು ಸ್ಥಾಪಿಸಿ ರೈತರಿಗೆ ಅಗತ್ಯವಿರುವ ಮಾಹಿತಿಯನ್ನು ಒದಗಿಸುವ ಕಾರ್ಯ ಮಾಡಿದೆ. ಜಲಾನಯನ ಅಭಿವೃದ್ಧಿ ಯೋಜನೆಯಡಿ ವಿವಿಧ ಬಗೆಯ ಮಣ್ಣುಗಳ ಮಾದರಿ ಹಾಗೂ ಮಣ್ಣುಗಳಿಗೆ ಪೂರಕವಾಗಿರುವ ಬೆಳೆ ಪದ್ಧತಿಯನ್ನು ರೈತರಿಗೆ ಪರಿಚಯಿಸುವ ಕಾರ್ಯ ನಡೆದಿದೆ. ಮಣ್ಣು ಮತ್ತು ನೀರು ಸಂರಕ್ಷಣೆ ವಿಭಾಗದ ವತಿಯಿಂದ ಸವಳು, ಜವಳು ಮಣ್ಣನ್ನು ಫಲವತ್ತುಗೊಳಿಸುವುದು, ನೀರನ್ನು ವ್ಯರ್ಥವಾಗಿ ಹರಿಯಬಿಡದೆ, ಸಮರ್ಪಕವಾಗಿ ಬಳಸುವ ಕಾರ್ಯಕ್ಕೆ ಒತ್ತು.

ನೀಡುವಂತಹ ಮಾಹಿತಿಯನ್ನು ರೈತ–ರಿಗೆ ಒದಗಿಸಲಾಗುತ್ತಿದೆ. ಇದರ ಜೊತೆಗೆ ಭತ್ತ, ಹತ್ತಿ, ಬೇಳೆಕಾಳು, ಎಣ್ಣೆ ಕಾಳುಗಳು, ಸಿರಿಧಾನ್ಯಗಳ ವಿವಿಧ ಬಗೆಯ ತಳಿಗಳ ಪರಿಚಯವನ್ನು ಕೃಷಿ ಮೇಳದಲ್ಲಿ ಮಾಡಿಕೊಡಲಾಗಿದೆ. ಸೂರ್ಯಕಾಂತಿ ಬೆಳೆಯನ್ನು ಲಾಭದಾಯಕಗೊಳಿಸಲು ಬೇಕಾದ ಕೃಷಿ ಪದ್ಧತಿಯನ್ನು ರೈತರಿಗೆ ಪರಿಚಯಿಸಲಾಗುತ್ತಿದೆ. ನೈಸರ್ಗಿಕ ವಿಪತ್ತು ಮತ್ತು ಕೃಷಿ ಹವಾಮಾನ ವಿಭಾಗದಿಂದ ರೈತರು ವಿವಿಧ ಬಗೆ ಪರಿಸ್ಥಿತಿಗಳಲ್ಲಿ ಅನುಸರಿಸಬೇಕಾದ ಬೇಸಾಯ ಕ್ರಮಗಳನ್ನು ತಿಳಿಸಿಕೊಡುವ ಕಾರ್ಯ ಕೃಷಿ ಮೇಳದಲ್ಲಿ ಮಾಡಿದೆ. ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರವು ಕೂಡ ಕೃಷಿಗೆ ಸಂಬಂಧಿಸಿದಂತೆ ಹೆಚ್ಚು ಹೆಚ್ಚು ಮಾಹಿತಿಯನ್ನು ರೈತರಿಗೆ ತಲುಪಿಸುವ ಕಾರ್ಯವನ್ನು ಕೃಷಿ ಮೇಳದಲ್ಲಿ ಮಾಡಲಾಗಿದೆ.

ವಿವಿಧ ಬಗೆಯ ಬಿತ್ತನೆ ಬೀಜಗಳ ತಳಿಗಳು, ಕೀಟನಾಶಕಗಳು, ಅತ್ಯಾಧುನಿಕ ಕೃಷಿ ಯಂತ್ರೋಪಕರಣಗಳನ್ನು ಕೃಷಿ ಮೇಳದಲ್ಲಿ ರೈತರಿಗೆ ಪರಿಚಯಿಸುವ ಕಾರ್ಯ ನಡೆದಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮ ಅಧ್ಯಕ್ಷ ಬಸನಗೌಡ ದದ್ದಲ್, ರಾಯಚೂರು ನಗರ ಶಾಸಕ ಡಾ. ಶಿವರಾಜ ಪಾಟೀಲ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಪಾಮಯ್ಯ ಮುರಾರಿ, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ರಾಜಶೇಖರ ರಾಮಸ್ವಾಮಿ, ಜಿಲ್ಲಾಧಿಕಾರಿ ನಿತೀಶ್ ಕೆ., ಜಿ.ಪಂ. ಸಿಇಒ ಈಶ್ವರಕುಮಾರ ಕಾಂದು, ಎಸ್‌ಪಿ ಅರುಣಾಂಗ್ಶು ಗಿರಿ, ಕೃಷಿ ವಿವಿ ಕುಲಪತಿ ಡಾ. ಎಂ. ಹನುಮಂತಪ್ಪ, ಮಹಾನಗರಪಾಲಿಕೆ ಆಯುಕ್ತ ಜುಬಿನ್, ಮೊಹಾಪಾತ್ರ, ಎಪಿಎಂಸಿ ಅಧ್ಯಕ್ಷ ಮಲ್ಲಿಕಾರ್ಜುನ ಗೌಡ, ಉಪಾಧ್ಯಕ್ಷ ಬಶೀರ್ ಅಹ್ಮದ್ ಉಪಸ್ಥಿತರಿದ್ದರು.

## ಅಕ್ಷತಾ ಕನ್ನಡ ಕಂಠ ಪಾಠ ಸ್ಪರ್ಧೆಯಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಸ.ಹಿ.ಪ್ರಾ.ಶಾಲೆಯ ನಸಲಾಪುರ ಗ್ರಾಮದ ಕು.ಅಕ್ಷತಾ ಕನ್ನಡ ಕಂಠಪಾಠ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದುಕೊಂಡು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿ ಶಾಲೆಗೆ ಹಾಗೂ ಊರಿಗೆ ಕೀರ್ತಿಯನ್ನು ತಂದಿದ್ದಾಳೆ.**

ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್ ಹಾಗೂ ಶಾಲಾ ಶಿಕ್ಷಣ ಇಲಾಖೆ, ರಾಯಚೂರು ಉಪನಿರ್ದೇಶಕರ ಕಾರ್ಯಾಲಯ, ರಾಯಚೂರು ಇವರ ಸಂಯುಕ್ತ ಆಶ್ರಯದಲ್ಲಿ ರಾಯಚೂರು ಜಿಲ್ಲಾ ಮಟ್ಟದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವಿದ್ಯಾರ್ಥಿಗಳ ಪ್ರತಿಭಾ






ಕಾರಂಜಿ ಹಾಗೂ ಕಲೋತ್ಸವ 2025–26 ಕುಮಾರಿ ಅಕ್ಷತಾ ತಂದೆ ನಾಗರಾಜ ಇವರು ದಿನಾಂಕ 04–02–2028 ರಂದು "ರಾಯಚೂರು ಜಿಲ್ಲಾ ಮಟ್ಟದ ಪ್ರಾಥ–'ಮಿಕ ಮತ್ತು ಪ್ರೌಢಶಾಲೆಗಳ ವಿದ್ಯಾರ್ಥಿಗಳ ಪ್ರತಿಭಾ ಕಾರಂಜಿ ಕಲೋತ್ಸವ 2025–26 ರ ಕಂಠ ಪಾಠ ಕನ್ನಡ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಗಳಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ.ಶಾಲೆಯ ಮುಖ್ಯೋಪಾಧ್ಯಾಯರಾದ ಕೃಷ್ಣಪ್ಪ, ಸಹಶಿಕ್ಷಕರಾದ ಲಕ್ಷ್ಮಣ ನಾಯ್ಕ್, ಅಶ್ವಿನಿ, ಅಥಿತಿ ಶಿಕ್ಷಕಿಯರಾದ ನಿರ್ಮಲಾ, ರಾಧಾ, ಬನಶಂಕರಿ ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಕೃಷ್ಣಯ್ಯ ನಾಯಕ ಪದಾಧಿಕಾರಿಗಳು, ಊರಿನ ಗ್ರಾಮಸ್ಥರು ಅಭಿನಂದಿಸಿ ಗೌರವಿಸಿದ್ದಾರೆ.

## ಆರೂಢರ ಐಕ್ಯಸ್ಥಳ ಗುರು ಆರೂಢರ ರಥೋತ್ಸವ



ನೈಜ್ಯ ದೆಸೆ ನ್ಯೂಸ್

**ಆರೂಢರ ಐಕ್ಯಸ್ಥಳ ತಾಲ್ಲೂಕಿನ ಆರೂಢನಂದಿಹಾಳದಲ್ಲಿ ಮಂಗಳವಾರ ಬ್ರಹ್ಮಸ್ವರೂಪಿ ಶ್ರೀಗುರು ಆರೂಢರ 44ನೇ ಜಾತ್ರಾ ಮಹೋತ್ಸವದ ರಥೋತ್ಸವ ಜರುಗಿತು. ಜಾತ್ರಾ ದಿನದಂದು ಮಠದಿಂದ ಹಾಗೂ ಗ್ರಾಮದ ಗುರುನಗೌಡ ಪಾಟೀಲ, ಬಸಯ್ಯ ಹಿರೇಮಠ, ಶೇಖನಗೌಡ ಹಳ್ಳಿ, ವಾಲೀಕಾರ, ನಿಂಗಣ್ಣ ಮದರಿ ಅವರ ಮನೆಗಳಿಂದ ಕಳಸ, ಹಗ್ಗ, ಛತ್ರಿ ಛಾಮರಗಳನ್ನು ವಾದ್ಯ ವೈಭವಗಳೊಂದಿಗೆ ತರಲಾಯಿತು.**

ಶ್ರೀಗುರು ಆರೂಢರ ಐಕ್ಯ ಮಂಟಪಕ್ಕೆ ವಿಶೇಷ ಅಲಂಕಾರ ಮಾಡಲಾಗಿತ್ತು. ಅಭೀಷೇಕದ ನಂತರ ಗಂಗಾಸ್ಥಳದಲ್ಲಿ ಪೂಜೆ ಸಲ್ಲಿಸಲಾಯಿತು. ಬಳಿಕ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಡೊಳ್ಳಿನ ಮೇಳ, ವೈಭವಗಳೊಂದಿಗೆ ಪಲ್ಲಕ್ಕಿ ಉತ್ಸವ ಹಾಗೂ ಮಹಿಳೆಯರಿಂದ ಕುಂಭ ಮೆರವಣಿಗೆ ನಡೆಸಿ ಆರೂಢರು ಸಾಧನೆಗೈದ ಕೊಂಪಿಗೆ ಸಾಗಿ ಮಠಕ್ಕೆ ಆಗಮಿಸಿತು. ಸಂಜೆ ಪುಣೆ, ಗೋವಾ, ಮೈಸೂರು, ಹುಬ್ಬಳ್ಳಿ, ಬೆಂಗಳೂರು, ಬಳ್ಳಾರಿ, ಯಾದಗಿರಿ,ಕಲಬುರ್ಗಿ, ಬಾಗಲಕೋಟೆ, ರಾಯಚೂರು ಸೇರಿದಂತೆ ಜಿಲ್ಲೆಯ ವಿವಿಧೆಡೆಯಿಂದ ಆಗಮಿಸಿದ ಭಕ್ತರು ಮಠದಿಂದ ಯಾಳವಾರ ರಸ್ತೆಯಲ್ಲಿರುವ ಪಾದಗಟ್ಟೆವರೆಗೆ ರಥ ಎಳೆದು ಭಕ್ತಿ ಸಮರ್ಪಿಸಿದರು.

ಭಕ್ತರು ಉತ್ತತ್ತಿ, ಪುಷ್ಪ ಹಾರಗಳನ್ನು ಸಮರ್ಪಿಸಿದರು. ರಥವನ್ನು ಕಡಕೋಳ ಹಿರೇಮಠದ ರಾಜಗುರು ಮಹಾಲಿಂಗ ಸ್ವಾಮೀಜಿ ಹಾಗೂ ಪ್ರಚನಕಾರ ಮನುಜಗುಣ ಶಿವಪುತ್ರ ಶರಣರುಪೂಜೆ ಸಲ್ಲಿಸಿ ಚಾಲನೆ ನೀಡಿದರು. ಜಾತ್ರೆ ಕಮಿಟಿ ಅಧ್ಯಕ್ಷ ಎಸ್.ವಿ. ಕನ್ನೂರ, ಕಾರ್ಯದರ್ಶಿ ಬಮ್ಮಯ್ಯ ಹಿರೇಮಠ ಇದ್ದರು.

# ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ: ಕವಿಗೋಷ್ಠಿ

## ಕಾವ್ಯವು ಮಾನವೀಯ ಮೌಲ್ಯ ಮತ್ತು ಸೌಹಾರ್ದತೆಯನ್ನು ಬೆಳೆಸುವ ಬಲಿಷ್ಠ ಅಸ್ತ್ರವಾಗಿದೆ :ರಂಗಣ್ಣ ಪಾಟೀಲ್ ಅಳ್ಳುಂಡಿ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಫೆಬ್ರುವರಿ 05 (ಕರ್ನಾಟಕ ವಾರ್ತೆ): ಕಾವ್ಯವು ಸಮಾಜದಲ್ಲಿ ಮಾನವೀಯ ಮೌಲ್ಯಗಳು ಮತ್ತು ಸೌಹಾರ್ದತೆಯನ್ನು ಬೆಳೆಸುವ ಬಲಿಷ್ಠ ಅಸ್ತ್ರವಾಗಿದೆ ಎಂದು ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ರಂಗಣ್ಣ ಪಾಟೀಲ್ ಅಳ್ಳುಂಡಿ ಹೇಳಿದರು.**

ಅವರು ಗುರುವಾರ ರಾಯಚೂರು ಮಹಿಳಾ ಸಮಾಜ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ–2026ರ ಪ್ರಯುಕ್ತ ಹಮ್ಮಿಕೊಂಡಿದ್ದ ಕವಿಗೋಷ್ಠಿ ಉದ್ಘಾಟಿಸಿ ಮಾತನಾಡಿದರು. ರಾಯಚೂರು ಜಿಲ್ಲೆಯ ಕಾವ್ಯ ಪರಂಪರೆ ಅತ್ಯಂತ ಶ್ರೀಮಂತವಾಗಿದ್ದು, ಇತ್ತೀಚಿನ ದಿನಗಳಲ್ಲಿ ಹಿರಿಯರು ಮತ್ತು ಕಿರಿಯರು ತಮ್ಮ ತಮ್ಮ ಕಾವ್ಯ ಸೃಜನಶೀಲತೆಯ ಮೂಲಕ ರಾಜ್ಯದ ಗಮನ ಸೆಳೆಯುತ್ತಿರುವುದು ನಮಗೆಲ್ಲ ಅಪಾರ ಸಂತೋಷ ನೀಡುತ್ತಿದೆ. ಓದುಗರು ಮತ್ತು ಬರಹಗಾರರು ಸದಾ ಸಮಾಜದ ಒಳಿತನ್ನು ಬಯಸುವ ಸಹೃದಯಿಗಳಾಗಿರಬೇಕು.

ಕವಿತೆ ಪ್ರಾಮಾಣಿಕ ಮನಸ್ಸಿನ ಅಭಿವ್ಯಕ್ತಿಯಾಗಿದ್ದು, ಕವಿ ಸಮಾಜದಲ್ಲಿ ನಡೆಯುವ ಘಟನೆಗಳಿಗೆ ಸ್ಪಂದಿಸಿ ತನ್ನ ಅನುಭವಗಳನ್ನು ಹೃದಯಸ್ಪರ್ಶಿಯಾಗಿ ವ್ಯಕ್ತಪಡಿಸಬೇಕಾಗಿದೆ ಎಂದರು. ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವಕ್ಕೆ ಅಧಿಕೃತವಾಗಿ ಚಾಲನೆ ನೀಡಲಾಗಿದ್ದು, ಇದರ ಅಂಗವಾಗಿ ನಿನ್ನೆ ಮಕ್ಕಳ ಹಬ್ಬವನ್ನು ಅತ್ಯಂತ ಉತ್ಸಾಹ ಹಾಗೂ ಸಂಭ್ರಮದಿಂದ ಆಚರಿಸಲಾಯಿತು. ರಾಯಚೂರು ಉತ್ಸವವು ಜನಮನದಲ್ಲಿ ಸಂತೋಷದ ಹಬ್ಬವಾಗಿ ಮೂಡಿಬಂದಿದ್ದು ಇದರ ಭಾಗವಾಗಿ ಕವಿ ಗೋಷ್ಠಿಯನ್ನು ಉದ್ಘಾಟಿಸಲಾಗಿದೆ. ಕವಿ ಗೋಷ್ಠಿಗಾಗಿ ಜಿಲ್ಲಾಡಳಿತದ ವತಿಯಿಂದ ಪತ್ರಿಕಾ ಪ್ರಕಟಣೆ ಮೂಲಕ ಕವಿಗಳನ್ನು ಆಹ್ವಾನಿಸಲಾಗಿದ್ದು, ಇದಕ್ಕೆ ಸ್ಪಂದಿಸಿ ನೂರಾರು ಕವಿಗಳು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದಾರೆ.




ನೋಂದಾಯಿತ ಕವಿಗಳನ್ನು ಹಿರಿಯ ಸಾಹಿತಿಗಳು, ಯುವ ಕವಿಗಳು, ಮಹಿಳಾ ಕವಿಗಳು ಹಾಗೂ ತುರ್ತು ಕವಿಗಳು ಎಂದು ವಿಂಗಡಣೆ ಮಾಡಿ, ನಾಲ್ಕು ಪ್ರತ್ಯೇಕ ಕವಿ ಗೋಷ್ಠಿಗಳನ್ನು ಆಯೋಜಿಸುವ ಮೂಲಕ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಲಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ಕೂಡ ಜಿಲ್ಲಾಡಳಿತದ ಸಹಕಾರದೊಂದಿಗೆ ಕವಿಗಳಿಗೆ ಪ್ರೋತ್ಸಾಹ ನೀಡುತ್ತಾ ಪೂರಕವಾಗಿ ನಿಂತಿದೆ. ಈ ಕವಿ ಗೋಷ್ಠಿಯಲ್ಲಿ ಸುಮಾರು 75 ಕವಿಗಳು ತಮ್ಮ ಕಾವ್ಯ ವಾಚನ ಮಾಡುವ ಮೂಲಕ ಎಡೆದೊರೆ ನಾಡು ರಾಯಚೂರು ಉತ್ಸವ ಸಾಹಿತ್ಯಿಕವಾಗಿ ಮತ್ತೊಂದು ಎತ್ತರವನ್ನು ತಲುಪಿಸುವ ಕಾರ್ಯ ಮಾಡಿದರು. ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರು ಹಾಗೂ ಕವಿ ಅನುವಾದಕರಾದ ಚಿದಾನಂದ ಸಾಲಿ ಅವರು ಕಾರ್ಯಕ್ರಮದ ಕುರಿತು ಮಾತನಾಡಿ, ಗದ್ಯದಲ್ಲಿ ಬರೆದಿದ್ದನ್ನು, ಕತ್ತರಿಸಿ, ಪದಗಳನ್ನು ಜೋಡಿಸುತ್ತಾ ಹೋದರೆ ಅದು ಕವಿತೆ ಆಗುತ್ತದೆ ಎಂಬ ತಪ್ಪು ಗ್ರಹಿಕೆ ಕೆಲವರಲ್ಲಿದೆ.

ಆದರೆ, ಗದ್ಯಕ್ಕೂ ಪದ್ಯಕ್ಕೂ ಇರುವ ಮುಖ್ಯ ವ್ಯತ್ಯಾಸವೆ ಕಾವ್ಯದ ಗುಣವಾಗಿದೆ. ಒಂದು ದೊಡ್ಡ ಜೀವನ ತತ್ವವನ್ನು ಸರಳವಾದ ಸಾಲುಗಳಲ್ಲಿ ಹೇಳುವವನೆ ನೀಜವಾದ ಕವಿ. ಅತ್ಯಂತ ಸಂಕೀರ್ಣ ಭಾಷೆ ಬಳಸಿ, ತಾನು ಹೇಳಬೇಕೆಂದುಕೊಂಡಿದ್ದನ್ನು ಕೇಳುವವರಿಗೆ ಕವನಗಳ ಮೂಲಕ ಹೇಳುವವನೆ ಕವಿ. ಜನ ಸಮೂಹದ ಧ್ವನಿ ಅಂತಲೂ ಕವಿಯನ್ನು ಕರೆಯುತ್ತಾರೆ. ಕವಿ, ಕವಿತೆಯ ಮೂಲಕ ಜನರ ಸಮಸ್ಯೆಗಳಿಗೆ ಧ್ವನಿಯಾಗುತ್ತಾನೆ. ಅದಕ್ಕಾಗಿ ಕವಿಯನ್ನು ಸಮಾಜದ ಅಘೋಷಿತ ಶಾಸಕ ಅಂತಲೂ ಕರೆಯಲಾಗುತ್ತದೆ. ಜನ ಸಮೂಹದ ಸಮಸ್ಯೆಗಳಿಗೆ, ಜನರ ಸಂಕಟಗಳಿಗೆ ಕನ್ನಡಿ ಹಿಡಿಯುವಂತಹ ಕೆಲಸ ಕವಿ ಮಾಡುತ್ತಾನೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಲಿಂಗಸುಗೂರಿನ ಸಾಹಿತಿಗಳಾದ ಗಿರಿರಾಜ ಹೊಸಮನಿ ಅವರು ಮಾತನಾಡಿದರು.



ಕವಿಗಳಾದ ಪಂಪಾಪತಿ ಶಾಸ್ತ್ರೀ, ಮಲ್ಲಣ್ಣ ಹರವಾಳ, ಮಹಾದೇವ ಎಸ್. ಪಾಟೀಲ್, ಖಾನ್ ಸಾಬ್ ಮೋಮಿನ್, ಜೆ.ಎಂ.ಶರಣಯ್ಯ ಸ್ವಾಮಿ, ಡಾ.ಹುಸೇನಪ್ಪ ಅಮರಾಪುರ, ಡಾ.ಸತೀಶ್ ಕುಮಾರ್ ಎಸ್., ಅನಿಲರಾಜ್ ಜೆ., ಮಹಾಂತೇಶ ಹೀರಾ, ಕೆ. ಸತ್ಯನಾರಾಯಣ, ಬಶೀರ್ ಅಹ್ಮದ್ ಹೊಸಮನಿ, ಡಾ.ವೆಂಕಟೇಶ ನವಲಿ, ಡಾ. ಎಸ್.ಜಿ.ಪಾಟೀಲ, ಅಮರಗುಂಡಪ್ಪ ಹೂಗಾರ, ದೇವರಾಜ್ ಎಸ್. ಬಪ್ಪೂರ, ಮುಜೀಬ್ ಮಾನ್ವಿ, ಚಂದ್ರಶೇಖರ ನಾಡಗೌಡ, ಡಾ.ಶಾಮಸುಂದರ ಪಟವಾರಿ, ಎಂ.ರಾಮಚಂದ್ರರಾವ್, ದೇವನಪಲ್ಲಿ ಶ್ರೀನಿವಾಸ್, ದುರುಗಪ್ಪ ಗುಡದೂರು, ಬಸವರಾಜ ಜಂಗಮರಹಳ್ಳಿ, ರುದ್ರಪ್ಪ ಎಸ್ ತಳವಾರ, ವೆಂಕಟೇಶ ಗುಡೂರ, ಶಿಕ್ಷಕ ಮಹೇಶ, ಮಲ್ಲಿಕಾರ್ಜುನ ನಾಯಕ, ಲಕ್ಷ್ಮಣ ಬಾರಿಕೇರ, ಮುರಳೀಕೃಷ್ಣ, ದೇವೇಂದ್ರ ಹುಡಾ, ಮಹಾಂತೇಶ ಗವಿಗಟ್ಟ, ಎಸ್.ಶಿವಮೂರ್ತಿ, ಗೋಪಿನಾಥ ದೇಸಾಯಿ, ಪ್ರಸನ್ನ ಪಟವಾರಿ, ಮುರುಗೇಶ ಕುಂಬಾರ, ಪಿ.ವೆಂಕಟೇಶ ಬಾಗಲವಾಡ, ಶ್ರೀಧರರಾವ್ ದೇಸಾಯಿ, ಸಣ್ಣ ಯಲ್ಲಪ್ಪ, ಮಂಜುನಾಥ ಗುತ್ತೇದಾರ, ರಾಘವೇಂದ್ರ ವಿ.ಹೆಚ್., ರಘುನಾಥರೆಡ್ಡಿ ಮನ್ನಲಾಪುರ, ಶಂಕರರಾವ್ ಉಭಾಳೆ, ಡಾ.ತಿಮ್ಮಯ್ಯ ಶೆಟ್ಟಿ ಇಲ್ಲೂರ, ಸಿದ್ದಣ್ಣ ನಿಲೋಗಿ, ಸಿದ್ಧಾರ್ಥ ವಲ್ಲಭ, ಮಹಾಂತಸ್ವಾಮಿ ಉಪ್ರಾಳ, ನೀಲಕಂಠಯ್ಯ ಮಳಿಮಠ ಗಲಗ, ಇಮಾಮುದ್ದೀನ್ ಮಾಡಗಿರಿ, ಕೆ.ಮಲ್ಲಿಕಾರ್ಜುನ ಕವಿತಾಳ, ಜಿ.ಶರಣ ಬಸವರಾಜ್, ಶರಣಪ್ಪ ಗಬ್ಬೂರು, ವೀರೇಶ್ ಗೋನವಾರ, ಚಂದ್ರಶೇಖರ ಮದ್ಲಾಪುರ, ಮಹಾದೇವ ಹಳ್ಳಿ, ಶಿವಪ್ಪ ಪಾಟೀಲ ಜಾನೇಕಲ್, ಮಂಜುನಾಥ ಸಾಹುಕಾರಮನಿ, ಸಿ.ಹನುಮಂತರಾಯ ಹಾಗೂ ಮತ್ತಿತರರು ಈ ಕವಿಗೋಷ್ಠಿಯಲ್ಲಿ ಪಾಲ್ಗೊಂಡು ಕವನ ವಾಚನ ಮಾಡಿದರು. ಕಾರ್ಯಕ್ರಮದಲ್ಲಿ ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಈರಣ್ಣ ಬಿರಾದಾರ, ಹಿರಿಯ ಸಾಹಿತಿಗಳಾದ ಬಿ.ಜಿ ಹುಲಿ, ರಾಯಚೂರು ತಾಲ್ಲೂಕು ಕಸಾಪ ಅಧ್ಯಕ್ಷರಾದ ಡಾ. ಬಿ.ವಿಜಯರಾಜೇಂದ್ರ, ಸಿಂಧನೂರು ತಾಲ್ಲೂಕು ಕಸಾಪ ಅಧ್ಯಕ್ಷರಾದ ಹೆಚ್.ಎಫ್. ಮಸ್ಕಿ, ಚುನಾವಣಾ ವಿಭಾಗದ ತಹಶಿಲ್ದಾರ ಪರಶುರಾಮ ಸೇರಿದಂತೆ ಕವಿಗಳು, ಕವನ ಆಸಕ್ತರು, ಸಾರ್ವಜನಿಕರು, ವಿದ್ಯಾರ್ಥಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು. ಅಣ್ಣಪ್ಪ ಮೇಟಿಗೌಡ ಕಾರ್ಯಕ್ರಮದ ನಿರೂಪಿಸಿದರು. ರಾವುತ್‌ರಾವ್ ಬರೂರ ಸ್ವಾಗತಿಸಿದರು. ನಾಗಪ್ಪ ಹೊರಪ್ಯಾಟಿ ಕಾರ್ಯಕ್ರಮ ನಿರ್ವಹಣೆ ಮಾಡಿದರೆ, ವಿಜಯಲಕ್ಷ್ಮಿ ಅಸ್ಕಿಹಾಳ ಅವರು ಕೊನೆಯಲ್ಲಿ ವಂದಿಸಿದರು.